ಅಚಲ

ಬಿಡಿಪ್ರತಿ : 4 ರೂ.

ತಿಂಗಳ ಪತ್ರಿಕೆ

ಮಾರ್ಚ್ - 2006

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಅಚಲ

ಸಂಪುಟ - 21 ಸಂಚಿಕೆ : 3

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು.

ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಪ್ರೀತಿಯ ಚಂದಾದಾರರೇ,

ಇಪ್ಪತ್ತೊಂದನೆಯ ವರ್ಷಕ್ಕೆ ಕಾಲಿಟ್ಟಿರುವ 'ಅಚಲ' ಓದುಗರ, ಚಂದಾದಾರರ, ಬರಹಗಾರರ ಬೆಂಬಲವನ್ನು ಬಹಳವಾಗಿ ಅಪೇಕ್ಷಿಸುತ್ತದೆ. ಇಲ್ಲಿಯವರೆಗೆ ನಿಮ್ಮ ಲೇಖನಗಳ ಮೂಲಕ ಚಂದಾ ಮತ್ತು ಆರ್ಥಿಕ ನೆರವಿನ ಮೂಲಕ ನಮ್ಮನ್ನು ಪ್ರೋತ್ಸಾಹಿಸಿದ್ದೀರಿ. ನಿಮ್ಮೆಲ್ಲರ ಪ್ರೋತ್ಸಾಹದಿಂದ ಅಚಲ ಬೆಳೆಯಬೇಕಿದೆ. ನಿಮ್ಮ ಚಂದಾ ಮುಗಿದ ನಂತರ ದಯವಿಟ್ಟು ನವೀಕರಿಸಿ. ನಿಮ್ಮ ಆತ್ಮೀಯರಿಗೆ, ಸ್ನೇಹಿತರಿಗೆ ಚಂದಾ ಮಾಡಿಸಿ ಅಚಲದ ಬಳಗವನ್ನು ವಿಸ್ತರಿಸಿ.

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ನ್ಯಾಯಾಲಯಗಳು ಮತ್ತು ಸಾಮಾಜಿಕ ನ್ಯಾಯ

ವೈಯಕ್ತಿಕ ಹಿಂಸೆಯಿರಲಿ, ಸಾಮಾಜಿಕ ಅಪಘಾತಗಳಿರಲಿ ನ್ಯಾಯಾಲಯದಿಂದ ನ್ಯಾಯ ದೊರಕಲು ವರ್ಷ, ವರ್ಷಗಳೇ ಕಾಯಬೇಕಾಗಿದೆ. ಇದಕ್ಕೆ ಸ್ಪಷ್ಟ ನಿದರ್ಶನ, ಇನ್ನೂ ನ್ಯಾಯಕ್ಕಾಗಿ ಕಾದಿರುವ ಭಾಂವ್ರಿದೇವಿ ಪ್ರಕರಣ, ರೂಪನ್ ಬಜಾಜ್, ತಂಡೂರಿ ಶರ್ಮ ಪ್ರಕರಣ, ಜೆಸ್ಸಿಕಾ ಲಾಲ್............ ವರ್ಷ, ವರ್ಷಗಳ ಕಾಲ ನಡೆದ ಈ ಮೊಕದ್ದಮೆಗಳಿಂದ ಜನರಿಗೆ ನ್ಯಾಯಾಲಯದಲ್ಲಿ ವಿಶ್ವಾಸ ಕುಸಿಯುವಂತೆ ಆಗುತ್ತಿವೆ, ಎಂದರೆ ಯಾರೂ ಆಶ್ಚರ್ಯ ಪಡಬೇಕಿಲ್ಲ.

ನ್ಯಾಯಾಲಯದ ದೀರ್ಘ ನಡೆಯಲ್ಲಿ ಆಗಬಹುದಾದ ಮತ್ತೊಂದು ಅನಾಹುತವೆಂದರೆ ಸಾಕ್ಷಿಗಳು ಮನಸ್ಸು ಬದಲಾಯಿಸಬಹುದು, ಇಲ್ಲವೇ ಅವರ ಮೇಲೆ ಒತ್ತಡಗಳು ಹೇರಲ್ಪಟ್ಟು ಅವರು ವಿರುದ್ಧ ಸಾಕ್ಷಿಗಳಾಗಿ ಕೆಲಸ ಮಾಡಬಹುದು. ಗುಜರಾತಿನ ಬೆಸ್ಟ್ ಬೇಕರಿ ಪ್ರಕರಣದಲ್ಲಿ ಸಾಕ್ಷಿಗಳನ್ನು ಬದಲಾಯಿಸುತ್ತಾ ಹೋದ ಜಾಹೀರಾ ಶೇಖ್ ನ್ಯಾಯಾಂಗದ ಪ್ರಕ್ರಿಯೆಗೆ ಸವಾಲಾದದ್ದು ಮಾತ್ರವಲ್ಲ, ಅವಳನ್ನು ರಕ್ಷಿಸಲು ಬಂದ ಅವಳ ವಕೀಲೆ ಟೀಸ್ಟ್ರಾ ಸೆಟ್ಲ್‌ವಾಡ್‌ಗಳಿಗೇ ಆಘಾತಕಾರಿಯಾಗುವಂತೆ ಪರಿವರ್ತನೆಗೊಂಡಳು. ಪರಿಸ್ಥಿತಿಯ ಒತ್ತಡಕ್ಕೆ ಅವಳು ಬಲಿಯಾಗಿರಬಹುದೆಂದು ಊಹಿಸಬಹುದಾದರೂ, ಅವಳೂ ಪರಿಸ್ಥಿತಿಯ ಲಾಭ ಪಡೆದುಕೊಂಡು ವರ್ತಿಸಿದ ರೀತಿ ಯಾವುದೇ ಸಾಮಾಜಿಕ ಹೋರಾಟಕ್ಕೇ ಧಕ್ಕೆಯಾಗುವಂತಹುದು. ಚಳುವಳಿಯ ಹಾದಿಯನ್ನು ಮಸುಕು ಮಾಡುವಂತಹುದು. ಜಾಹೀರಾ ಶೇಖ್‌ಳ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯ ನೀಡಿದ ತಿರ್ಪು ನ್ಯಾಯಾಕಾಂಕ್ಷಿಗಳಿಗೆ ಸಮಾಧಾನ ನೀಡುವುದೇನೋ ಸಹಜ. ಆದರೆ ಜೆಸ್ಸಿಕಾ ಲಾಲ್‌ಳ ಪ್ರಕರಣದಲ್ಲಿ ಸಾಕ್ಷಿಗಳು ಬದಲಾದ ರೀತಿ ಮತ್ತು ಈ ಸಂದರ್ಭದಲ್ಲಿ ನ್ಯಾಯಾಲಯ ನೀಡಿರುವ ತೀರ್ಪು ನಿಜಕ್ಕೂ ಚಿಂತನೆಗೆ ಗುರಿ ಮಾಡುತ್ತದೆ. ಜನರ ಕಣ್ಣೆದುರಿಗೇ ಹಾಡು ಹಗಲಲ್ಲಿ ಗುಂಡಿಟ್ಟುಕೊಂದ ಆರೋಪಿಗೆ ಶಿಕ್ಷೆಯಾಗಲು ಸಾಕ್ಷ್ಯಗಳು ಇಲ್ಲವಾಗುವುದು ನಮ್ಮ ಪ್ರಜಾಪ್ರಭುತ್ವದ ವಿಪರ್ಯಾಸವೇ ಸರಿ.

ಈ ಎಲ್ಲ ತೊಂದರೆಗಳೊಂದಿಗೆ ನಮ್ಮ ನ್ಯಾಯಾಲಯದ ನಡಾವಳಿಯಲ್ಲಿರುವ ಮತ್ತೊಂದು ಬಹುಮುಖ್ಯ ಕೊರತೆಯೆಂದರೆ, ಹಣವಿದ್ದವರಿಗೆ ಮಾತ್ರ ನ್ಯಾಯಾಲಯದ ಮೆಟ್ಟಿಲು ಹತ್ತಲು ಸಾಧ್ಯವಾಗುವುದು. 'ಉಚಿತ ಕಾನೂನು ನೆರವು' ಎನ್ನುವುದೂ ಕೂಡ ಬಹಳಷ್ಟು ಸಂದರ್ಭಗಳಲ್ಲಿ ಯಾವುದೇ ರೀತಿಯ ಸಾಂತ್ವನವನ್ನು, ನ್ಯಾಯವನ್ನು ಕೊಡಲು ಸಾಧ್ಯವಾಗುವುದಿಲ್ಲ. ''ಕೋರ್ಟು ಕಟ್ಟೆ ಹತ್ತಿ ಗೆದ್ದವನು ಸೋತ, ಸೋತವನು ಸತ್ತ'' ಎಂಬ ಗಾದೆ ಮಾತು ನಮ್ಮ ನಡುವೆ ಪ್ರಚಲಿತವಾಗಿರುವುದು ಇಂತಹ ಅನುಭವಗಳ ಹಿನ್ನೆಲೆಯಲ್ಲಿಯೇ. ಕೊಲೆ, ಅತ್ಯಾಚಾರದ ಪ್ರಕರಣಗಳಲ್ಲಿರಲಿ, ವಿವಾಹ ವಿಚ್ಛೇದನದಂತಹ ಬದುಕಿಗೆ ಅಗತ್ಯವಾದ ಪ್ರಕರಣಗಳಲ್ಲೂ ಹಣವಿಲ್ಲದೆ ಬೀದಿ ಪಾಲಾಗುವ ಹಲವಾರು ಮಹಿಳೆಯರ ಬದುಕು 'ನ್ಯಾಯಾಲಯ'ದ ಸಂಸ್ಥೆಗೆ ಸವಾಲಾಗಿ ನಿಲ್ಲುತ್ತದೆ. ಸಮಾಜದ ಅತ್ಯಂತ ಕನಿಷ್ಟ ನೆಲೆಯಲ್ಲಿರುವವರಿಗೆ, ದುರ್ಬಲರಿಗೆ, ಮಹಿಳೆಯರಿಗೆ ನ್ಯಾಯಾಲಯಗಳಿಂದ ಸಾಮಾಜಿಕ ನ್ಯಾಯ ಸಿಗುವುದು ಕನಸಾಗಿ ಮಾತ್ರ ಉಳಿಯುವುದೇ ? ಹಾಗೂ ಒಮ್ಮೆ ನನಸಾದರೆ ಅದಕ್ಕೆ ಅವರುಗಳು ತೆರಬೇಕಾದ ಬೆಲೆ ಎಂತು? ಇದನ್ನು ಇಡೀ ಸಮಾಜ ಗಂಭೀರವಾಗಿ ಚಿಂತಿಸಬೇಕಾಗಿದೆ.

- ಎನ್. ಗಾಯತ್ರಿ

ಬದುಕಿನಲ್ಲಿ ಪಡೆದ ಅತ್ಯುತ್ತಮ ಸಲಹೆ

- *ವಿಜಯಲಕ್ಷ್ಮಿ ಪಂಡಿತ್*

ಒಂದು ದಶಕದ ಹಿಂದೆ, ಅದೊಂದು ಬಿಸಿಲಿನ ಮಧ್ಯಾಹ್ನ ಮಹಾತ್ಮ ಗಾಂಧಿಯೊಂದಿಗೆ ಮಾತನಾಡುತ್ತಾ ಕುಳಿತಿದ್ದಾಗ ನನಗೊಂದು ಸಲಹೆ ನೀಡಿದರು. ಅಂದಿನವರೆಗೂ ನನ್ನ ಜೀವನದಲ್ಲಿ ಹಿಂದೆ ಯಾರಿಂದಲೂ ಇಂತಹ ಸಲಹೆ ಬಂದಿರಲಿಲ್ಲ.

ಪ್ರತಿಯೊಬ್ಬ ಮನುಷ್ಯನಿಗೂ ತಾನು ನಂಬಿಕೆಯಿಟ್ಟಿರುವ ಮನುಷ್ಯತ್ವದಲ್ಲಿ ನಂಬಿಕೆ ಕುಸಿದಾಗ ಮಾನಸಿಕ ಆಘಾತವಾಗುತ್ತದೆ. ಅಂತಹ ಒಂದು ಸ್ಥಿತಿಯಲ್ಲಿ ಆಗ ನಾನಿದ್ದೆ. ನನ್ನ ಪತಿ ಆಗಷ್ಟೇ ಮರಣಿಸಿದ್ದರು. ಪತಿಯನ್ನು ಕಳೆದುಕೊಂಡ ಅಪಾರ ನಷ್ಟದ ಬೆನ್ನಲ್ಲೇ ಎರಗಿದ ನೋವೆಂದರೆ ಭಾರತೀಯ ಕಾನೂನಿನಡಿ ನನಗೆ ಸ್ವತಂತ್ರ ಅಸ್ತಿತ್ವವೇ ಇಲ್ಲವೆಂಬ ಕಹಿ ಸತ್ಯ. ಅಲ್ಲಿಯವರೆಗೂ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಇತರ ಮಹಿಳೆಯರ ಜೊತೆಗೆ ಪುರುಷರೊಡನೆ ಸಮಸಮವಾಗಿ ಹೋರಾಟದಲ್ಲಿ ಭಾಗಿಯಾಗಿ ಅದರ ಫಲವಾಗಿ ದೇಶ ಸ್ವಾತಂತ್ರ್ಯವನ್ನು ಪಡೆದಾಗಿತ್ತು. ಇಷ್ಟಾದರೂ ಕಾನೂನಿನಲ್ಲಿ ನಮ್ಮ ಅಸ್ಮಿತೆ ನಮ್ಮ ಪುರುಷರೊಂದಿಗಿನ ಸಂಬಂಧದಿಂದಲೇ ನಿರ್ಧಾರವಾಗಿತ್ತು. ಪುತ್ರನಿಲ್ಲದ ವಿಧವೆಯಾದ ನನಗೆ ಕುಟುಂಬದ ಆಸ್ತಿಯಲ್ಲಿ ಪಾಲಿರಲಿಲ್ಲ. ಹಾಗೆಯೇ ನನ್ನ ಇಬ್ಬರು ಹೆಣ್ಣು ಮಕ್ಕಳಿಗೂ ಕೂಡ. ಈ ಕರುಳು ಕೊಯ್ಯುವ ಸ್ಥಿತಿಯನ್ನು ನಾನು ಪ್ರತಿಭಟಿಸಿದೆ. ಇಂತಹ ಪುರಾತನ ಕಾನೂನನ್ನು ಬೆಂಬಲಿಸುವ ನನ್ನ ಕುಟುಂಬದ ಸದಸ್ಯರ ಬಗ್ಗೆಯೂ ನನ್ನ ಮನಸ್ಸು ಕಹಿಯಾಯಿತು.

ಇಂತಹ ಸಂದರ್ಭದಲ್ಲಿ ನಾನು ಗಾಂಧೀಜಿಯವರನ್ನು ಕಾಣಲು ಹೋಗಿದ್ದೆ. ಸಮ್ಮೇಳನವೊಂದರಲ್ಲಿ ಭಾಗವಹಿಸಲು ಅಮೇರಿಕೆಗೆ ಹೊರಟಿದ್ದ ನಾನು ಅದಕ್ಕೆ ಮುಂಚೆ ಗಾಂಧಿಯವರನ್ನು ಭೇಟಿಯಾಗಿ ನನ್ನ ಗೌರವ ಸೂಚಿಸುವುದು ಅವರ ಭೇಟಿಯ ಉದ್ದೇಶವಾಗಿತ್ತು. ನಮ್ಮ ಸಂಭಾಷಣೆಯ ನಂತರ ಗಾಂಧಿ ಕೇಳಿದರು : "ನಿನ್ನ ಬಂಧುಗಳೊಂದಿಗೆ ಶಾಂತಿ-ಮೈತ್ರಿ ಉಂಟಾಯಿತೇ ?"

ಆದರೆ ಆಗ ಗಾಂಧಿ ನನ್ನ ವಿರೋಧ ಪಕ್ಷವಹಿಸಿದರೆನಿಸಿ ಬಹಳ ಆಶ್ಚರ್ಯವಾಯಿತು. "ನಾನು ಯಾರೊಂದಿಗೂ ಜಗಳವಾಡಿಲ್ಲ" ಎಂದುತ್ತರಿಸಿದೆ. "ಆದರೆ ಕಿತ್ತು ಹೋಗಿರುವ ಕಾನೂನಿನ ಲಾಭ ಪಡೆದು ನನ್ನನ್ನು ಅಪಮಾನಿಸುವ ಮತ್ತು ಕಷ್ಟಕೊಡುವ ಜನರೊಂದಿಗೆ ನನಗೆ ಎಂತಹ ಸಂಬಂಧವೂ ಬೇಡ' ಎಂದೆ.

ಕಿಟಕಿಯಾಚೆ ದೃಷ್ಟಿಯಿಟ್ಟು ನೋಡುತ್ತಾ ಗಾಂಧಿ ಒಂದು ನಿಮಿಷ ಮೌನ ವಹಿಸಿ, ನಂತರ ನನ್ನತ್ತ ತಿರುಗಿ ನೀನು ಅವರಲ್ಲಿ ಹೋಗಿ ಅವರಿಗೆ ವಿದಾಯ ಹೇಳಿಯೇ ಊರಿಗೆ ಹೋಗಬೇಕು. ಇದು ಸಭ್ಯತೆ. ಭಾರತದಲ್ಲಿ ನಾವು ಇಂತಹ ಮೌಲ್ಯಗಳಿಗೆ ಬೆಲೆ ಕೊಡುತ್ತೇವೆ."

'ಇಲ್ಲ' ನಾನು ಪ್ರತಿಭಟಿಸಿದೆ. "ನಿಮ್ಮನ್ನು ಸಂತೋಷಗೊಳಿಸಲೆಂದು ನಾನು ನನಗೆ ತೊಂದರೆ ಕೊಡುವವರ ಬಳಿಗೆ ಹೋಗುವುದಿಲ್ಲ".

"ನಿನಗೆ ಯಾರೂ ತೊಂದರೆ ಕೊಡಲು ಸಾಧ್ಯವಿಲ್ಲ. ನೀನೇ ತೊಂದರೆ ಕೊಟ್ಟುಕೊಳ್ಳಬೇಕು, ಅಷ್ಟೆ "ನಿನಗೇ ತೊಂದರೆಯಾಗುವಷ್ಟು ನಿನ್ನಲ್ಲಿರುವ ಕಹಿ ನಿನ್ನ ಹೃದಯವನ್ನು ಘಾಸಿಗೊಳಿಸುತ್ತದೆ, ನೀನು ಅದನ್ನು ತಡೆಯದಿದ್ದರೆ."

ನಾನು ಸುಮ್ಮನಾದೆ. ಅವರೇ ಮಾತನ್ನು ಮುಂದುವರಿಸಿದರು : "ನೀನು ಹೊಸ ದೇಶಕ್ಕೆ ಹೋಗುತ್ತಿದ್ದೀಯಾ, ಏಕೆಂದರೆ ನೀನು ಅಸಂತುಷ್ಟಳಾಗಿದ್ದೀಯ. ಅದರಿಂದ ಪಲಾಯನ ಹೂಡಬೇಕಾಗಿದೆ. ನಿನ್ನ ಹೃದಯದಲ್ಲೇ ಕಹಿಯಿರುವಾಗ ನೀನು ಹೊರಗೆ ನೆಮ್ಮದಿಯನ್ನು ಪಡೆಯಲು ಸಾಧ್ಯವೇ ? ಇದರ ಬಗ್ಗೆ ಯೋಚಿಸಿ ನಿರ್ಧರಿಸು. ಸ್ವಲ್ಪ ವಿನಯವಿರಲಿ. ನೀನು ಪ್ರೀತಿ ಪಾತ್ರರನ್ನು ಕಳೆದುಕೊಂಡಿದ್ದೀಯ. ಆ ನೋವೇ ಸಾಕಷ್ಟಿದೆ. ಅಂತಹ ಸಂಕಟದ ನಡುವೆ ಮತ್ತೆ ನಿನ್ನ ಮನಸ್ಸನ್ನು ಮತ್ತೇಕೆ ಘಾಸಿಗೊಳಿಸುತ್ತೀಯ, ನಿನ್ನ ಹೃದಯವನ್ನು ಶುಚಿಗೊಳಿಸಲು ಬೇಕಾದ ಧೈರ್ಯವಿಲ್ಲವೆಂಬ ಕಾರಣಕ್ಕಾಗಿ."

ಮಹಾತ್ಮರ ಮಾತುಗಳು ನನ್ನನ್ನು ಸುಮ್ಮನಿರಲು ಬಿಡಲಿಲ್ಲ. ಕಾಡುತ್ತಲೇ ಇತ್ತು. ನನ್ನೊಳಗಿನ ಘರ್ಷಣೆಯ ನಂತರ ಕೆಲವು ದಿನಗಳಾದ ಮೇಲೆ ನಾನು ಕೊನೆಗೇ ನನ್ನ ಮೈದುನನಿಗೆ ಫೋನ್ ಮಾಡಿ ಮಾತಾಡಿದೆ. ನಾನು ಊರು ಬಿಟ್ಟು ಹೋಗುವ ಮುನ್ನ ಅವರ ಕುಟುಂಬವನ್ನು ಭೇಟಿ ಮಾಡಬೇಕೆಂದು ತಿಳಿಸಿದೆ. ಐದು ನಿಮಿಷಗಳಿಗೆ ಮುಂಚೆ ನನ್ನ ಮನಸ್ಸು ಅವರನ್ನು ಕುರಿತು ಸ್ನೇಹದಿಂದ ಚಿಂತಿಸಿರಲಿಲ್ಲ. ಆದರೆ ಅವರನ್ನು ಭೇಟಿಯಾದ ನಂತರ ಎಲ್ಲರಿಗೂ ಒಂದು ರೀತಿಯ ನಿರಾಳ ಭಾವ. ನನ್ನ ಭವಿಷ್ಯದ ಯೋಜನೆಗಳನ್ನು ಅವರೊಂದಿಗೆ ಚರ್ಚಿಸಿದೆ. ಇದರಿಂದ ನನ್ನ ಮೇಲಾದ ಪರಿಣಾಮ ಅದ್ಭುತ. ನನ್ನ ಹೆಗಲ ಮೇಲಿದ್ದ ದೊಡ್ಡದೊಂದು ಹೊರೆ ಕಳಚಿದ ಅನುಭವ.

ಈ ಸಣ್ಣ ವರ್ತನೆಯು ನನ್ನ ಬದುಕಿನಲ್ಲಿ ಮಹತ್ವದ ಬದಲಾವಣೆಯನ್ನು ತಂದಿತು. ಇದಾದ ಒಂದೂವರೆ ವರ್ಷಗಳ ನಂತರ ನಾನು ಮತ್ತೆ ನ್ಯೂಯಾರ್ಕ್‌ಗೆ ವಿಶ್ವಸಂಸ್ಥೆಗೆ ಭಾರತೀಯ ನಿಯೋಗವೊಂದರ ನೇತೃತ್ವ ವಹಿಸಿ ಹೋಗಿದ್ದೆ. ಅಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವಾಸಿಸುತ್ತಿದ್ದ ಭಾರತೀಯ ಮೂಲದ ನಿವಾಸಿಗಳಿಗೆ ಉಂಟಾಗಿದ ತೊಂದರೆಗಳ ಬಗ್ಗೆ ದೂರು ಕೊಂಡೊಯ್ದು ಹೊರಟಿದ್ದೆ. ಇಬ್ಬರ ನಡುವೆಯೂ ಹೇಳಲು ಕಹಿ ಸಂಗತಿಗಳಿದ್ದವು. ನನ್ನ ಮತ್ತು ನನ್ನ ದೇಶದ ಘನತೆಗೆ ಅಪಮಾನ ಮಾಡುವಂತೆ ಅವರು ಮಾಡಿದ ಎಲ್ಲ ವೈಯಕ್ತಿಕ ನಿಂದೆಗಳನ್ನು ಸೂಕ್ತವಾಗಿ ಎದುರಿಸಿ ಅವರಿಗೆ ತಿರುಗೇಟು ನೀಡಿದೆ.

ಈ ವಾಗ್ವಾದದ ಬಿಸಿಯೆಲ್ಲಾ ಆರಿದ ಮೇಲೆ ಒಂದು ಕ್ಷಣ ಸುಮ್ಮನೆ ಕುಳಿತು ಯೋಚಿಸುತ್ತಿದ್ದಾಗ, ತಕ್ಷಣ ಗಾಂಧಿ ನೆನಪಾದರು. ಇಂದು ನನ್ನ ವರ್ತನೆಯನ್ನು ಗಾಂಧಿ ಒಪ್ಪುತ್ತಿದ್ದರೇ? ಎಂಬ ಅನುಮಾನ ಮೂಡಿತು. ಅವರಿಗೆ ಗುರಿ ಎಷ್ಟು ಮುಖ್ಯವೋ ಮಾರ್ಗವು ಅಷ್ಟೇ ಮುಖ್ಯ. ನಮ್ಮ ಆತ್ಮ ಗೌರವಕ್ಕೆ ಧಕ್ಕೆ ಮಾಡಿಕೊಂಡು ನಮಗೆ ಬೇಕಾದಂತಹ ನಿರ್ಣಯವನ್ನು ಮಂಡಿಸಿಕೊಳ್ಳುವಂತೆ ಮಾಡುವುದು ಎಷ್ಟು ಸರಿ ? ಎಂಬ ಪ್ರಶ್ನೆ ತಲೆದೋರಿತು.

ಆದರೆ ರಾತ್ರಿ ಮಲಗಲು ಹೋಗುವ ಮುನ್ನ ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತು : ಏನೇ ಕಷ್ಟವಾಗಲೀ, ವಿಶ್ವಸಂಸ್ಥೆಯ ಸಭೆಯಲ್ಲಿ ನನ್ನ ಮಾತು ಮಿತಿಮೀರಬಾರದೆಂದು ನಿರ್ಧರಿಸಿದೆ. ಚರ್ಚೆಯನ್ನು ಎಲ್ಲಿಂದ ಆರಂಭಿಸಿದ್ದವೋ ಅಲ್ಲಿಗೇ ಹಿಂತಿರುಗಿ ಬಂದೆ, ಯಾವುದೇ ವೈಯಕ್ತಿಕ ನಿಂದನೆಗಳಿಗೆ ಅವಕಾಶ ಕೊಡದೆ, ಅಗ್ಗದ ಭಾಷೆ ಬಳಸದೆ ಚರ್ಚೆಯನ್ನು ಮುಂದುವರಿಸಿದೆ. ನನ್ನ ಎದುರಾಳಿಗಳೂ ಕೂಡ ಬೇರೆಯೇ ಹಂತದಲ್ಲಿ ನಮ್ಮೊಡನೆ ಚರ್ಚೆ ನಡೆಸಬೇಕಾಯಿತು ಮತ್ತು ಇದರಿಂದಾಗಿ ವಿಷಯದ ಗುಣಗಳ ಬಗ್ಗೆ ಹೆಚ್ಚು ಚರ್ಚೆ ನಡೆಯಿತು.

ಸಭೆಯ ಕೊಠಡಿಯಿಂದ ನಿರ್ಗಮಿಸುವುದಕ್ಕೆ ಮುಂಚೆ, ಕೊನೆಯ ದಿನ ನಾನು ಎದ್ದು ಹೋಗಿ ಎದುರಾಳಿ ನಿಯೋಗದ ಮುಖಂಡನನ್ನು ಕುರಿತು ಮಾತನಾಡಿದೆ : ''ಚರ್ಚೆಯಲ್ಲಿ ನಾನು ಆಡಿದ ಮಾತು ಮತ್ತು ನನ್ನ ವರ್ತನೆಯಿಂದ ನಿಮಗೆ ನೋವಾಗಿದ್ದರೆ ನನ್ನನ್ನು ಕ್ಷಮಿಸಿರೆಂದು ಕೇಳಿಕೊಳ್ಳುತ್ತೇನೆ''. ನನ್ನ ಕೈ ಕುಲುಕುತ್ತಾ ಅವರು ''ನನಗೆ ನಿಮ್ಮ ಬಗ್ಗೆ ಯಾವ ದೂರು ಇಲ್ಲ'' ಎಂದುತ್ತರಿಸಿದರು.

ಆಮೇಲೆ ಅವರೊಡನೆ ಸಂಭಾಷಿಸುವುದು ನನಗೆ ಸಲೀಸೆನಿಸಿತು. ಅದಕ್ಕಿಂತ ಹೆಚ್ಚಾಗಿ ನನ್ನ ಮನಸ್ಸಿಗೇ ನನಗೇ ಆರಾಮೆನಿಸಿತು. ಮತ್ತೊಮ್ಮೆ ಗಾಂಧೀಜಿಯ ಹಿತವಚನ ನನ್ನನ್ನು ಉಳಿಸಿತು.

ಇಂತಹ ದೊಡ್ಡ ಸಂಗತಿಗಳಿರಲಿ, ನನ್ನ ದೈನಂದಿನ ಬದುಕಿನ ಚಿಕ್ಕ ಚಿಕ್ಕ ಘಟನೆಗಳಲ್ಲೂ ಈ ದೃಷ್ಟಿಕೋನ ಬೆಳೆಸಿಕೊಳ್ಳಲು ಪ್ರಯತ್ನಿಸುವೆ. ಎಷ್ಟೋ ಮಹಿಳೆಯರು ಇಂತಹ ಎಷ್ಟೋ ದುರ್ಘಟನೆಗಳನ್ನು ನನ್ನೊಂದಿಗೆ ಹಂಚಿಕೊಂಡದ್ದಿದೆ. ಮುಖ್ಯವಾಗಿ ಮನೆಗೆ ಭೋಜನಕ್ಕೆಂದು ಅತಿಥಿಗಳು ಆಗಮಿಸಿದ್ದಾರೆ. ಆದರೆ ಭೋಜನವೇ ಇಲ್ಲ, ಆಗ ಏನಾಗಬಹುದು? ನನ್ನ ಬದುಕಿನ ಅಂತಹದೊಂದು ಘಟನೆ ಹೇಳುವೆ.

ಗ್ರೇಟ್ ಬ್ರಿಟನ್‌ನ ಪ್ರಧಾನ ಮಂತ್ರಿ ಮತ್ತು ಲೇಡಿ ಈಡನ್ ನನ್ನ ಮನೆಗೆ ಅತಿಥಿಗಳಾಗಿ ಬರುವವರಿದ್ದರು. ಯುನೈಟೆಡ್ ಕಿಂಗ್‌ಡಮ್‌ನ ಭಾರತೀಯ ರಾಯಭಾರಿಯಾಗಿದ್ದ ನನಗೆ ಇವರ ಆಗಮನ ಬಹು ಮಹತ್ವದ್ದಾಗಿತ್ತು. ಭೋಜನಕೂಟಕ್ಕೆ ಅಗತ್ಯವಾದ ಎಲ್ಲವನ್ನೂ ಸಂಪೂರ್ಣವಾಗಿ ನಾನೇ ಯೋಜಿಸಿದ್ದೆ - ಊಟದ ವಿವರಗಳಿಂದ ಹಿಡಿದು ಹೂವು, ಮೇಣದ ಬತ್ತಿಯ ಬಣ್ಣದವರೆಗೆ. ಅತಿಥಿಗಳು ಬಂದರು. ಮದ್ಯದ ಸೇವನೆ ನಡೆಯಿತು. ನಂತರ ಬಟ್ಲರ್‌ಗೆ ಸಂಜ್ಞೆ ಮಾಡಿ 'ಊಟ ಸಿದ್ಧ'ವಿದೆಯೆಂದು ಪ್ರಕಟಿಸಲು ಹೇಳಿದೆ. ನಂತರ ಕಾದೆವು. ಆದರೆ ಮತ್ತೆ ಮದ್ಯದ ಬಟ್ಟಲುಗಳೇ ಬಂದಾಗ ಗಾಭರಿಯಾಗಿ ಕೆಳಗಿಳಿದು ಅಡುಗೆಮನೆಗೆ ಓಡಿದೆ. ಅಲ್ಲಿ ನೋಡುವುದೇನು ? ಆಘಾತಕರ ದೃಶ್ಯ ಕಾದಿತ್ತು. ಕುಡುಕ ಅಡಿಗೆಯವ ಕುಡಿಯುತ್ತಾ ಅಮಲಿನಲ್ಲಿ ಕುಳಿತಿದ್ದ. ಮೇಜಿನ ಮೇಲೆ ಕತ್ತರಿಸಿದ ಮಾಂಸದ ತುಂಡುಗಳು ಹಾಗೇ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಡಿಗೆಯ ಆಳು ಮತ್ತು ಮನೆ ಸೇವಕ ಗಾಭರಿಯಿಂದ ಚಡಪಡಿಸುತ್ತಾ ನಿಂತಿದ್ದರು. ಅಡಿಗೆಯವನ ಮೇಲೆ ಅಸಾಧ್ಯ ಸಿಟ್ಟು ಬಂತು. 'ಎದ್ದು ಹೋಗು. ನಿನ್ನನ್ನು ಈ ಕೂಡಲೇ ಕೆಲಸದಿಂದ ವಜಾ ಮಾಡಿದ್ದೇನೆ', ಎಂದು ಹೇಳುವ ಮನಸ್ಸಾಯಿತು. ಕೂಡಲೇ ನನಗೆ ಸಮಾಧಾನ ತಂದುಕೊಂಡೆ. ನಂತರ ಭೋಜನದ ಕೊಠಡಿಗೆ ಹೋಗಿ ಇರುವ ವಿಷಯ ತಿಳಿಸಿ, ಅಲ್ಲಿದ್ದ ಉಳಿದ ಊಟವನ್ನೇ ತಿಂದೆವು. 'ಮೆನು'ವಿನಲ್ಲಿ ಸೂಚಿಸಿದ್ದ ತಿಂಡಿ ಇಲ್ಲದ್ದು ಭೋಜನಕ್ಕೆ ಕೊರೆಯಾಯಿತೇನೋ ನಿಜ, ಆದರೆ ತಿನ್ನುವುದೇ ಬದುಕಿನ ಅಸ್ತಿತ್ವದ ಪ್ರಶ್ನೆಯಲ್ಲ, ಎಂದು ಸಮಾಧಾನ ಮಾಡಿಕೊಂಡೆ.

ಮನುಷ್ಯನ ಮನಸ್ಸಿನೊಳಗೆ ದ್ವೇಷವಿರಿಸಿಕೊಂಡರೆ, ಅದು ಹೊರಗಿನವನನ್ನು ಸುಡುವುದಕ್ಕಿಂತ ಹೆಚ್ಚಾಗಿ ಅವನನ್ನೇ ಘಾಸಿಗೊಳಿಸುತ್ತದೆ, ಎಂಬ ಸತ್ಯ ನನ್ನ ಬದುಕಿನುದ್ದಕ್ಕೂ ಮರೆಯದಂತೆ ನನ್ನನ್ನು ನಾನು ನೆನಪಿಸಿಕೊಳ್ಳುತ್ತಲೇ ಇದ್ದೆ. ಗಾಂಧಿ ನೀಡಿದ ಅಮೂಲ್ಯ ಸಲಹೆಯಿದು.

1955ರಲ್ಲಿ ಭಾರತದ ಹೈ ಕಮೀಷನರ್ ಆಗಿದ್ದಾಗ ವಿಜಯಲಕ್ಷ್ಮಿ ಪಂಡಿತ್ ಬರೆದ ಲೇಖನದ ಕನ್ನಡ ರೂಪ.

ಉತ್ತರವಿರದ ಪ್ರಶ್ನೆಗಳು

ಉತ್ತರವಿರದ ಪ್ರಶ್ನೆಗಳು : ಡಿ. ಸಿ. ಗೀತಾ
[ಕವನ ಸಂಕಲನ]
ಪ್ರಕಾಶಕರು : ಸುಮುಖ ಪ್ರಕಾಶನ
ಬೆಂಗಳೂರು, ವರ್ಷ ನವೆಂಬರ್ 2005
ಪುಟಗಳು : 64 ಬೆಲೆ : ರೂ. 30/-

ಕನ್ನಡ ಅಧ್ಯಾಪಕಿ ಡಿ.ಸಿ. ಗೀತಾ ಅವರ ಮೊದಲ ಕವನ ಸಂಕಲನ 'ಉತ್ತರವಿರದ ಪ್ರಶ್ನೆಗಳು'. ಈ ಸಂಕಲನದಲ್ಲಿರುವ ಒಟ್ಟು ಮೂವತ್ತೊಂಬತ್ತು ಕವನಗಳು ಈಗಾಗಲೇ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತಹವು. 'ಉತ್ತರವಿರದ ಪ್ರಶ್ನೆಗಳು' ಎಂಬ ಶೀರ್ಷಿಕೆಯ ಕವನವನ್ನು ಒಳಗೊಂಡ ಈ ಸಂಕಲನದುದ್ದಕ್ಕೂ ಕವಯಿತ್ರಿಯ ಚಿಂತನೆಗಳು ಪ್ರಶ್ನೆಯ ಸ್ವರೂಪ ಪಡೆದು ಸಂಕಲನದ ಧೋರಣೆಯನ್ನು ಸ್ಪಷ್ಟ ಪಡಿಸುತ್ತವೆ.

ದಾರಿ ಸವೆಸುವ ನೆಪಕೆ
ಕಡಲೆ ಪುರಿ ಸಾಕೆ ?
ಅಥವಾ
ಇರುವುದಿಲ್ಲ ಉತ್ತರ
ಎಲ್ಲ ಪ್ರಶ್ನೆಗಳಿಗೂ


ಇಲ್ಲಿ ಅನ್ವೇಷಣೆಯ ತಹತಹವಿದ್ದರೂ, ಗುರಿ ಸಿಕ್ಕಿಯೇ ಬಿಡುತ್ತದೆನ್ನುವ ಸಮಧಾನ ಸ್ಥಿತಿಯಿಲ್ಲ. ಸಂಪ್ರದಾಯದ ಹಾದಿಯಿಂದ ಪಕ್ಕ ಸರಿದು, ಅಥವಾ ಅದಕ್ಕೆ ಬೆನ್ನುತಿರುಗಿಸಿ ಪರಂಪರೆಗೆ ಸವಾಲೆಸೆಯುವ ಪ್ರಶ್ನೆಗಳು ನಿರಂತರ ಅನ್ವೇಷಣೆಯ ಹಾದಿಯನ್ನು ನಿರ್ಮಿಸಿವೆ. ಆದ್ದರಿಂದ ಕವಯಿತ್ರಿ ಅಕ್ಕ, ಸೀತಾ, ರಾಧೆಯರ ಭಾವ ಪ್ರಪಂಚದ ಮೂಲಕ ಬಯಲ ಹಾಡು ಹಾಡಿದ್ದಾರೆ. 'ಸಂತೆಯೊಳಗೊಂದು ಮನೆಯ ಮಾಡಿದರೂ ನಿರ್ಲಿಪ್ತವಾಗಿ ತನಗೆ ಬೇಕೆನಿಸಿದಂತೆ ಉಸಿರಾಡಬಲ್ಲ ಶಕ್ತಿ ಇಲ್ಲಿಯ ಕವನಗಳಿಗಿದೆ.

ಇಲ್ಲಿನ ಕವನಗಳು ಸುಂದರ ಪ್ರತಿಮೆಗಳ ಮೂಲಕ ಉಸಿರಾಡುತ್ತವೆ :

ತನ್ನನ್ನೇ ಸುಟ್ಟುಕೊಂಡು
ಬೆಳಕ ನೀಡೋ ಮೇಣದ ಬತ್ತಿ
ಅಂತ ಕೊಂಚ ಹೆಚ್ಚೇ ಪ್ರೀತಿಯಲಿ
ಮುಟ್ಟಿ ಮೈದಡವಿದರೆ ಸುಟ್ಟೇ ಬಿಡುವುದೇ ?

ಈಗಾಗಲೇ ಕನ್ನಡ ಕಾವ್ಯ ಪ್ರಪಂಚದಲ್ಲಿ ಅಭಿವ್ಯಕ್ತವಾಗಿರುವ ಕಾವ್ಯ ಸಂವೇದನೆಯನ್ನು ತಮ್ಮ ಕವನಗಳಲ್ಲಿ ಧಾರಾಳವಾಗಿ ಬಳಸಿಕೊಂಡಿರುವ ಕವಯಿತ್ರಿಯ ಈ ಸಂಕಲನದ ಕವಿತೆಗಳು ಪರಂಪರೆಯೊಂದರ ನಿರಂತರತೆಗೆ ಹಾದಿ ಮಾಡಿಕೊಟ್ಟಿವೆ.

ಪುಸ್ತಕದ ಮುನ್ನುಡಿಯಲ್ಲಿ ಕವಿ ಎಸ್.ಜಿ. ಸಿದ್ದರಾಮಯ್ಯನವರು ಹೇಳಿರುವ 'ಇವರ ಕವನಗಳಲ್ಲಿ ನೆಲ ಮುಗಿಲ ಸೆಳೆತವಿದೆ. ಅದ್ವೈತದ ಪರಿಭಾವನೆಯಲ್ಲಿ ಆ ಸೆಳೆತದ ಫಲಿತವಿದೆ. ಇದು ಇಲ್ಲಿನ ಸಂವೇದನೆಯಾಳದ ಸಾಕ್ಷಿ ಪ್ರಜ್ಞೆಯ ಸ್ಥಿತಿಯನ್ನು ಕುರಿತು



ಹೇಳಿದ ಮಾತು. ಆದರೆ ಈ ಸಾಕ್ಷಿ ಪ್ರಜ್ಞೆಗೆ ಮುಖಾಮುಖಿಯಾಗಿರುವ ಜೀವವಾದರೋ ನೆಲ ಮುಗಿಲನ್ನು ಬೇರೆ ಬೇರೆಯಾಗಿಯೇ ಗಣಿಸಿ ಒಂದನ್ನು ಬಿಟ್ಟು ಇನ್ನೊಂದರ ಕಡೆಗೆ ನಡೆಯುವುದು. ಜೀವದ ಈ ದ್ವೈತದ ಕಾರಣದಿಂದಾಗಿ ಸಾಕ್ಷೀ ಭಾವ ಕಳೆದುಕೊಳ್ಳುವುದು. ಅಪಾರವನ್ನು ಅನುಭವಿಸುವುದು ನಿರಾಶೆಯನ್ನು. ಈ ಸ್ಥಿತಿಯನ್ನು ಬಹುತೇಕ ಕವನಗಳು ಕಟ್ಟಿಕೊಡುತ್ತವೆ'. ಎಂಬ ಮಾತುಗಳು ಗೀತಾ ಅವರ ಒಟ್ಟು ಕಾವ್ಯ ಪ್ರಪಂಚವನ್ನು ಅನಾವರಣಗೊಳಿಸುತ್ತದೆ. ◻◻

-ಅಚಲ

ಜೆಸ್ಸಿಕಾಲಾಲ್ - ಜಾಹಿರಾಶೇಖ್ ತಿಳಿಸಿದ ಸತ್ಯಗಳು

- ಹೇಮಲತಾ ಮಹಿಷಿ

ಜೆಸ್ಸಿಕಲಾಲ್ ಹಾಗೂ ಜಾಹಿರಾಶೇಖ್ ಪ್ರಕರಣಗಳಿಂದಾಗಿ ನಮ್ಮ ದೇಶದ ಕ್ರಿಮಿನಲ್ ನ್ಯಾಯ ವ್ಯವಸ್ಥೆ ಹಾಗೂ ನ್ಯಾಯದಾನ ವ್ಯವಸ್ಥೆಯ ಬಗ್ಗೆ ಎಲ್ಲರ ಗಮನ ಮತ್ತೊಮ್ಮೆ ಹರಿದಿದೆ. ಅದರಲ್ಲಿನ ಲೋಪ-ದೋಷಗಳನ್ನು ತೆಗೆದು ಹಾಕಿ ಅನ್ಯಾಯಕ್ಕೆ ಒಳಗಾದವರಿಗೆ ನ್ಯಾಯ ಒದಗಿಸಬೇಕು, ಅಪರಾಧಿಗಳು ಎಷ್ಟೇ ಪ್ರಭಾವಶಾಲಿಗಳಾಗಿದ್ದರೂ, ಧನವಂತರಾಗಿದ್ದರೂ ಶಿಕ್ಷೆಯಾಗಬೇಕು. ಅದರಿಂದ ತಪ್ಪಿಸಿಕೊಂಡು ಹೋಗಲು ಅವಕಾಶವಾಗಬಾರದು ಎನ್ನುವ ಕೂಗು-ಆಕ್ರೋಶ ಎಲ್ಲೆಡೆಯಿಂದ ಕೇಳಿಬರುತ್ತಿದೆ. ಮಾಧ್ಯಮಗಳಲ್ಲಿ ಈ ಬಗ್ಗೆ ಚರ್ಚೆಯಾಗುತ್ತಿದೆ. ರಾಷ್ಟ್ರಪತಿಗಳವರೆಗೆ ದೂರು ಮುಟ್ಟಿದೆ, ಸೋನಿಯಾ ಗಾಂಧಿಯವರು ಈ ಬಗ್ಗೆ ಕಾಳಜಿ ವ್ಯಕ್ತಪಡಿಸಿದ್ದಾರೆ, ಮಹಿಳಾ ಸಂಘ-ಸಂಸ್ಥೆಗಳು ತಮ್ಮ ಅತೃಪ್ತಿ ವ್ಯಕ್ತಪಡಿಸಿವೆ. ಪರಿಣಾಮವಾಗಿ ಪಾರ್ಲಿಮೆಂಟ್ ಈ ಬಗ್ಗೆ ಕಾನೂನು ತಿದ್ದುಪಡಿ ಮಾಡಲು ಮುಂದಾಗಿದೆ.

ಆಗಿದ್ದಾದರೂ ಏನು ? ಏಪ್ರಿಲ್ 29, 1999 ರಂದು ರಾತ್ರಿ ದೆಹಲಿಯ ಶ್ರೀಮಂತರು ಸೇರಿ ಕುಡಿಯುವ-ಕುಣಿಯುವ ಪಾರ್ಟಿಯಲ್ಲಿ ಜೆಸ್ಸಿಕಾಲಾಲ್ ಎನ್ನುವ 'ಮಾಡೆಲ್' ಯವತಿಯನ್ನು ಹರಿಯಾಣಾದ ಮಂತ್ರಿಯ ಮಗ ಮನು ಶರ್ಮಾ ಎನ್ನುವವನು ತನ್ನ ಪಿಸ್ತೂಲಿನಿಂದ ಪಾಯಿಂಟ್ ಬ್ಲಾಂಕ್‌ನಲ್ಲಿ ಹೊಡೆದು ಕೊಂದು ಹಾಕಿದನೆನ್ನುವುದು ಅವನ ಮೇಲಿರುವ ಆಪಾದನೆ. ಅವನೊಂದಿಗಿದ್ದವರು, ಅವನಿಗೆ ತಲೆ ಮರೆಸಿಕೊಳ್ಳಲು, ಸಾಕ್ಷಿ ಮುಚ್ಚಿಡಲು ಸಹಾಯ ಮಾಡಿದವರು ಉಳಿದ 8 ಮಂದಿ ಆಪಾದಿತರು. ದೆಹಲಿಯ ಪೋಲೀಸರು ತನಿಖೆ ನಡೆಸಿ ಈ ಒಂಬತ್ತು ಜನರ ಮೇಲೆ ಜಸ್ಸಿಕಾಲಾಲ್ ಹತ್ಯೆಯ ತತ್ಸಂಬಂಧಿ ಆಪಾದನೆಯ ಕೇಸು ದಾಖಲು ಮಾಡಿದರು. ವಿಚಾರಣೆ ನಡೆಸಿದ ದೆಹಲಿಯ ಸೆಷನ್ಸ್ ನ್ಯಾಯಲಯ ಆಪಾದನೆಯನ್ನು ರುಜುವಾತು ಪಡಿಸಲು ಪ್ರಾಸಿಕ್ಯೂಶನ್ ವಿಫಲವಾಗಿದೆ ಎಂದು ಹೇಳಿ ಎಲ್ಲಾ ಆಪಾದಿತರನ್ನು ಖುಲಾಸೆ ಮಾಡಿತು. ಎಷ್ಟೆಲ್ಲಾ ಜನರ ಕಣ್ಣ ಮುಂದೆಯೇ ಇಂತಹ ಹೇಯಕೃತ್ಯ ನಡೆಸಿದ ಅಪರಾಧಿ ಹೀಗೆ ಶಿಕ್ಷೆಯಿಂದ ನುಣಿಚಿಕೊಂಡಿದ್ದನ್ನು ಕಂಡು ಜನ ನಮ್ಮ ನ್ಯಾಯ ವ್ಯವಸ್ಥೆಯಲ್ಲಿಯೇ ನಂಬಿಕೆ ಕಳೆದುಕೊಳ್ಳುವಂತಾಯಿತು. ತನಿಖೆಯಲ್ಲಿಯೇ ಲೋಪವಿದ್ದುದೂ ಅಲ್ಲದೇ, ಕಣ್ಣಾರೆ ಕಂಡು ಪೋಲೀಸರ ಬಳಿ ಆಪಾದಿತರ ವಿರುದ್ಧ ಹೇಳಿಕೆ ಕೊಟ್ಟಿದ್ದ ಬಹುಮುಖ್ಯ ಸಾಕ್ಷಿದಾರರು ನ್ಯಾಯಾಲಯದಲ್ಲಿ ವಿಚಾರಣೆಯ ಸಮಯದಲ್ಲಿ ತಮ್ಮ ಆ ಹೇಳಿಕೆಯನ್ನು ಅಲ್ಲಗಳೆದು ಪ್ರಾಸಿಕ್ಯೂಶನ್‌ಗೆ ವಿರುದ್ಧವಾಗಿ, ಆಪಾದಿತರಿಗೆ ಅನುಕೂಲವಾಗುವಂತೆ ಸಾಕ್ಷಿ ನುಡಿದಿರುವುದು ಈ ಬಗ್ಗೆ ಮತ್ತೊಮ್ಮೆ ವಿವಾದವನ್ನು ಎಬ್ಬಿಸಿದೆ.

ಈ ರೀತಿ ವಿರುದ್ಧ ಸಾಕ್ಷ್ಯ ಹೇಳುವುದು (ತಾವು ಪೋಲೀಸರಿಗೆ ಮೊದಲು ಕೊಟ್ಟ ಹೇಳಿಕೆಗೆ ವಿರುದ್ಧವಾಗಿ ಸಾಕ್ಷ್ಯ ಹೇಳುವುದು) ಕ್ರಿಮಿನಲ್ ಕೇಸುಗಳಲ್ಲಿ ಅಪರೂಪವೇನಲ್ಲ. ಆ ಕಾರಣವಾಗಿಯೇ ಬಹುಪಾಲು ಕ್ರಿಮಿನಲ್ ಮೊಕದ್ದಮೆಗಳು ವಿಫಲವಾಗುತ್ತವೆ, ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಪ್ರಾಸಿಕ್ಯೂಶನ್ ಸಾಕ್ಷಿಗಳನ್ನು ಒಡೆದು ವಿರುದ್ಧ ಸಾಕ್ಷ್ಯ ಹೇಳುವಂತೆ ಮಾಡುವುದೂ ಆಪಾದಿತರ ವಕೀಲರ ಜಾಣ್ಮೆಯ ಭಾಗ ಎಂದು ಭಾವಿಸಲಾಗಿದೆ. ಈ ರೀತಿ ವಿರುದ್ಧ ಸಾಕ್ಷಿ ಹೇಳಲು ಕಾರಣವೇನು? ಹಾಗೆ ಮಾಡಿಯೂ ಏನು ತೊಂದರೆ ಇಲ್ಲದೇ ಸಾಕ್ಷಿಗಳು ಹೇಗೆ ಪಾರಾಗುತ್ತಾರೆ ? ತಮ್ಮ ವಿರುದ್ಧ ಸಾಕ್ಷ್ಯ ಹೇಳದಂತೆ ಸಾಕ್ಷಿದಾರರನ್ನು ಅವರ ಮನೆಯವರನ್ನು ಆಪಾದಿತರು ಬೆದರಿಸುವುದು / ಪ್ರಾಣ ಬೆದರಿಕೆ ಒಡ್ಡುವುದು, ಇಲ್ಲವಾದರೆ ಹಣದ ಆಮಿಷ ತೋರಿಸಿ, 'ತಾವು ಮೊದಲು ಪೋಲೀಸರಿಗೆ ಕೊಟ್ಟ ಹೇಳಿಕೆ ಪೋಲೀಸರ ಒತ್ತಾಯದಿಂದಾಗಿ ಕೊಟ್ಟಿದ್ದು ತಮಗೆ ಏನೂ ಗೊತ್ತೇ ಇಲ್ಲ' ಎಂದು ಅವರಿಂದ ಹೇಳಿಸುವುದು ಸಾಮಾನ್ಯವಗಿ ಅನುಸರಿಸುವ ತಂತ್ರ. ಸಾಕ್ಷಿದಾರರಿಗೆ ಇಲ್ಲಿ' ರಕ್ಷಣೆ ಇಲ್ಲದಿರುವುದರಿಂದ ಅನೇಕರು ಬೆದರಿಕೆಗೆ ಮಣಿಯುತ್ತಾರೆ. ಸಾಕ್ಷ್ಯ ಹೇಳಲು ನ್ಯಾಯಾಲಯಕ್ಕೆ ಬರುವಾಗ, ಹೇಳಿದ ಮೇಲೆ ಸಾಕ್ಷಿದಾರರನ್ನು ಹತ್ಯೆಗೈದ ಅನೇಕ ಪ್ರಕರಣಗಳು ಉದಾಹರಣೆಗಿವೆ. ಗೂಂಡಾಗಳು, ಪ್ರಭಾವಶಾಲಿ ವ್ಯಕ್ತಿಗಳು ಆಪಾದಿತರಾಗಿದ್ದರಂತೂ

ಸಾಕ್ಷಿದಾರರಿಗೆ ಬೆದರಿಕೆ ಇದ್ದೇ ಇರುತ್ತದೆ. ಹಾಗಾಗಿ ಸಾಕ್ಷಿದಾರರು 'ನಮ್ಗೇಕೆ ಸಲ್ಲದ ಉಸಾಬರಿ' ಎಂದು ಸಾಕ್ಷ್ಯ ಹೇಳಲು ಮುಂದೆ ಬರುವುದಿಲ್ಲ ಅಥವಾ ಪೋಲೀಸರ ಹತ್ತಿರ ಹೇಳಿಕೆ ಕೊಟ್ಟಿದ್ದರೂ ಮುಂದೆ ಅದನ್ನು ನ್ಯಾಯಾಲಯದಲ್ಲಿ ನಿರಾಕರಿಸುತ್ತಾರೆ. ಆದರೆ, ಅವರು ಹಾಗೆ ಮಾಡುತ್ತಾರೆಂದ ಮಾತ್ರಕ್ಕೆ ನ್ಯಾಯಾಲಯಕ್ಕೆ ಅದನ್ನು ತಡೆಗಟ್ಟಲು ಏನೂ ಅಧಿಕಾರವಿಲ್ಲವೇ ಎನ್ನುವ ಅನುಮಾನ ತಲೆದೋರುತ್ತದೆ. ಈಗಿರುವ ಕಾನೂನಿನಂತೆ ನ್ಯಾಯಾಲಯದ ಮುಂದೆ ಸತ್ಯ ಹೇಳುತ್ತೇನೆಂದು ಪ್ರಮಾಣ ಮಾಡಿ ಹೇಳಿಕೆ ಕೊಟ್ಟು ನಂತರ ಅದನ್ನು ನಿರಾಕರಿಸಿದರೆ, ಅದಕ್ಕೆ ವಿರುದ್ಧ ಹೇಳಿಕೆ ಕೊಟ್ಟರೆ ಮಾತ್ರ ನ್ಯಾಯಾಲಯ ಅಂತಹ ಸಾಕ್ಷಿದಾರರ ವಿರುದ್ಧ ಸುಳ್ಳು ಸಾಕ್ಷ್ಯದ ಅಪರಾಧಕ್ಕಾಗಿ ಕ್ರಮಕೈಗೊಳ್ಳಲು, ಶಿಕ್ಷೆ ವಿಧಿಸಲು ಅವಕಾಶವಿದೆ. ಪೋಲೀಸರ ಮುಂದೆ ಕೊಡುವ ಹೇಳಿಕೆ ಪ್ರಮಾಣಪೂರ್ವಕವಾಗಿ ಕೊಟ್ಟಿರುವ ಹೇಳಿಕೆಯಾಗಿರುವುದಿಲ್ಲ, ಹೇಳಿಕೆದಾರರ ಸಹಿಯನ್ನು ಕೂಡಾ ಅದಕ್ಕೆ ಪಡೆದಿರುವುದಿಲ್ಲ, ಹಾಗಾಗಿ ಅಂತಹ ಹೇಳಿಕೆಯನ್ನು ಸುಲಭವಾಗಿ ನಿರಾಕರಿಸಬಹುದು, ಶಿಕ್ಷೆಯ ಭಯವಿಲ್ಲದೇ.

ನಮ್ಮ ಕ್ರಿಮಿನಲ್ ನ್ಯಾಯವ್ಯವಸ್ಥೆ ಹಾಗೂ ಕಾನೂನುಗಳ ಸುಧಾರಣೆಗಾಗಿ ಕರ್ನಾಟಕದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ವಿ.ಎಸ್. ಮಳೀಮಠ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಕೇಂದ್ರ ಸರ್ಕಾರ ನೇಮಿಸಿದ್ದು ಆ ಸಮಿತಿಯ ಹಲವಾರು ಮಹತ್ವದ ತಿದ್ದುಪಡಿಗಳನ್ನು ಬದಲಾವಣೆಗಳನ್ನು ಸೂಚಿಸಿದೆ. ಅದರಲ್ಲಿ ಮುಖ್ಯವಾದ ಒಂದು ವಿಷಯ ತನಿಖೆಯ ಆರಂಭಿಕ ಹಂತದಲ್ಲಿ ದಾಖಲಿಸಿಕೊಳ್ಳುವ ಸಾಕ್ಷಿ ಹೇಳಿಕೆ ಹಾಗೂ ಸಾಕ್ಷಿಗಳ ರಕ್ಷಣೆಯ ಕುರಿತಾಗಿದೆ. ಆದರೆ, ಈ ವಿಷಯದ ಬಗ್ಗೆ ನಿರ್ಲಕ್ಷ್ಯ ತಾಳಿದ ಸರ್ಕಾರ ಈಗ ಜೆಸ್ಸಿಕಾ ಪ್ರಕರಣದ ಬಗ್ಗೆ ಎದ್ದ ಸಾರ್ವಜನಿಕ ಪ್ರತಿಕ್ರಿಯೆಯನ್ನು ಕಂಡು ತರಾತುರಿಯಿಂದ ತಿದ್ದುಪಡಿ ಕಾನೂನನ್ನು ತರಲು ಮುಂದಾಗಿದೆ.

ಇದೇ ಸಂದರ್ಭದಲ್ಲಿ ಹೊರಬಂದ ಗುಜರಾತಿನ ಬೆಸ್ಟ್ ಬೇಕರಿ ಪ್ರಕರಣದ ತೀರ್ಪು ಕೂಡಾ ಈ ವಿಷಯದ ಬಗ್ಗೆ ಗಮನವನ್ನು ಸೆಳೆದಿದೆ. ಈ ಕ್ರಿಮಿನಲ್ ಮೊಕದ್ದಮೆ ಇತ್ತೀಚೆಗೆ ತೀರ್ಮಾನವಾಗಿದ್ದು ಎಲ್ಲಾ ಆಪಾದಿತರಿಗೆ ಜೀವಾವಧಿ ಶಿಕ್ಷೆಯಾಗಿದೆ. ಈ ಮೊಕದ್ದಮೆಯ ವಿಚಾರಣೆಯ ಸಂದರ್ಭದಲ್ಲಿ ಮುಖ್ಯಸಾಕ್ಷಿಯಾಗಿದ್ದ ಜಾಹಿರಾಶೇಖ್, ಅವಳ ಕುಟುಂಬದವರು ಪದೇ-ಪದೇ ತಮ್ಮ ಹೇಳಿಕೆಗಳನ್ನು ಬದಲಾಯಿಸುತ್ತಾ ಅವಳಿಗೆ ಆರಂಭದಿಂದಲೂ ಬೆಂಬಲವಾಗಿ ನಿಂತು ಜೀವನ ನಿರ್ವಹಣೆಗೆ ಸಾರ್ವಜನಿಕರಿಂದ ಹಣ ಸಂಗ್ರಹಿಸಿಕೊಟ್ಟು ಸರ್ವೋಚ್ಚ ನ್ಯಾಯಾಲಯದಲ್ಲಿಯೂ ಹೋರಾಡಿ ಮೊಕದ್ದಮೆಯನ್ನು ಗುಜರಾತಿನಿಂದ ಮುಂಬೈ ನ್ಯಾಯಾಲಯಕ್ಕೆ ವರ್ಗಾಯಿಸಿಕೊಟ್ಟ ತನ್ನ ವಕೀಲೆ ಟೀಸ್ಟಾ ಸೆಟ್ಲ್‌ವಾಡ್ ವಿರುದ್ಧವೇ ಹೇಳಿಕೆ ಕೊಟ್ಟ ವಿಷಯ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ನರೇಂದ್ರ ಮೋದಿಯ ಗುಜರಾತ್ ಸರ್ಕಾರ ಜಾಹಿರಾಶೇಖ್ - ಅವಳ ಮನೆಯವರು ಈ ರೀತಿ ಮಾಡಲು ಎಲ್ಲಾ ರೀತಿಯ ಬೆದರಿಕೆ ಹಣಕಾಸಿನ ಆಮಿಷ ಒಡ್ಡಿದ್ದರು ಎನ್ನುವುದು ಸರ್ವೋಚ್ಚ ನ್ಯಾಯಾಲಯದ ಮುಂದೆಯೂ ಪ್ರಸ್ತಾಪಗೊಂಡಿದ್ದು ಅದು ಅವಳ ಹಣಕಾಸಿನ ಮೂಲ ತಿಳಿಯಲು ಒಂದು ಸಮಿತಿ ನೇಮಿಸಿತ್ತು. ಇತ್ತೀಚೆಗೆ ಈ ನ್ಯಾಯಾಲಯ ಹೀಗೆ ಪದೇ-ಪದೇ ಬೇರೆ-ಬೇರೆ ಹೇಳಿಕೆಗಳನ್ನು ಕೊಟ್ಟು ನ್ಯಾಯಾಡಳಿತಕ್ಕೆ ತೊಂದರೆ ಉಂಟು ಮಾಡಿದ್ದಕ್ಕಾಗಿ ಅವಳ ವಿರುದ್ಧ ನ್ಯಾಯಾಲಯ ನಿಂದನೆ ಆರೋಪದ ಮೇಲೆ ಕ್ರಮ ಕೈಗೊಂಡು 1 ವರ್ಷದ ಸಾದಾ ಸಜಾ, 10,000ರೂ.ಗಳ ಜುಲ್ಮಾನೆ ವಿಧಿಸಿದೆ. ಹಾಗೆಯೇ ಕೆಳ ನ್ಯಾಯಾಲಯದಲ್ಲಿಯೂ ಪ್ರಮಾಣ ಪೂರ್ವ ಹೇಳಿಕೆಯನ್ನು ಅಲ್ಲಗಳೆದು ವಿರುದ್ಧ ಹೇಳಿಕೆ ಕೊಟ್ಟಿದ್ದಕ್ಕಾಗಿ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ಈ ಎರಡೂ ಪ್ರಕರಣಗಳು ಬಹುಶಃ ಭಾರತೀಯ ಕ್ರಿಮಿನಲ್ ನ್ಯಾಯಾದಾನ ವ್ಯವಸ್ಥೆಯ ಇತಿಹಾಸದಲ್ಲಿ ಮೈಲಿಗಲ್ಲುಗಳು, ಸಾಕ್ಷಿ ವಿಚಾರಣೆಯ ಪ್ರಕ್ರಿಯೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತರಲು ಕಾರಣೀಭೂತ ಪ್ರಕರಣಗಳು ಎನಿಸುತ್ತವೆ.

ಈಗ ಕೇಂದ್ರ ಸರ್ಕಾರದ ಕಾನೂನು ಇಲಾಖೆ ಸಿದ್ಧಪಡಿಸಿರುವ ಮಸೂದೆ ಸಾಕ್ಷ್ಯ ಅಧಿನಿಯಮ ಹಾಗೂ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಹಲವಾರು ಕಲಂಗಳಲ್ಲಿ ತಿದ್ದುಪಡಿ ತರಲು ಮುಂದಾಗಿದೆ. 10 ವರ್ಷ ಅದಕ್ಕಿಂತ ಹೆಚ್ಚಿನ ಅವಧಿಯ ಶಿಕ್ಷೆ ವಿಧಿಸಬಹುದಾದ ಅಪರಾಧ ಪ್ರಕರಣಗಳಲ್ಲಿ (ಕೊಲೆ, ಮಾನಭಂಗ, ಗುಂಪು ಹಿಂಸೆ ಇತ್ಯಾದಿ) ಈ ಕ್ರಮ ಅನುಸರಿಸಬೇಕು. ಅದರಂತೆ, ಭಾರತ ಸಾಕ್ಷ್ಯ ಅಧಿ

ನಿಯಮದಲ್ಲಿ 154 ಕಲಂನಲ್ಲಿ ಹೊಸ ಉಪಕಲಂ ಸೇರಿಸಿ, ಸಾಕ್ಷಿಯು ಹಿಂತೆಗೆದುಕೊಂಡ, ಪೋಲೀಸರ ಮುಂದಿನ ಹೇಳಿಕೆಯನ್ನು ಕೂಡಾ ವಿಚಾರಣೆಯ ಸಮಯದಲ್ಲಿ ಪ್ರಾಸಿಕ್ಯೂಶನ್ ಅಂತಹ ಸಾಕ್ಷಿಯ ವಿರುದ್ಧ ಸಾಕ್ಷ್ಯವಾಗಿ ಬಳಸಿಕೊಳ್ಳಬಹುದು. ಹಾಗೆಯೇ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ ಕಲಂ 164-ಎ ಕೆಳಗೆ, ಪೋಲೀಸರು ತಾವೇ ಸಾಕ್ಷಿ ಹೇಳಿಕೆಯನ್ನು ದಾಖಲಿಸಿಕೊಳ್ಳದೇ, ಆ ಕೂಡಲೇ ಯಾವುದೇ ಹತ್ತಿರದ ಮ್ಯಾಜಿಸ್ಟ್ರೇಟರ ಮುಂದೆ ಆ ಸಾಕ್ಷಿಯನ್ನು ಕರೆದುಕೊಂಡು ಹೋಗಿ ಅವರಿಂದ ಪ್ರಮಾಣ ಪೂರ್ವಕವಾಗಿ ಹೇಳಿಕೆ ದಾಖಲಿಸಿಕೊಳ್ಳಬೇಕು. ಅದು ಕೂಡಲೇ ಸಾಧ್ಯವಾಗದಿದ್ದರೆ ಕಲಂ 161, 344, 311, 161, 162, 195 ಮತ್ತು 340 ಕಲಂಗಳಡಿ ಪೋಲೀಸರು ದಾಖಲಿಸಿಕೊಂಡ ಹೇಳಿಕೆಗಳಿಗೆ ಸಾಕ್ಷಿಗಳ ಸಹಿ/ಹೆಬೆಟ್ಟು ಗುರುತು ಪಡೆಯಬೇಕು ಮತ್ತು ಅದರ ನಕಲುಗಳನ್ನು ಆ ಕೂಡಲೇ ಮ್ಯಾಜಿಸ್ಟ್ರೇಟರಿಗೆ ಮತ್ತು ಪೋಲೀಸ್ ಮೇಲಧಿಕಾರಿಗಳಿಗೆ ಕಳಿಸಿಕೊಡಬೇಕು. ಸಾಕ್ಷಿಗಳು ಪ್ರಕರಣ ನಡೆದ ಕೂಡಲೇ ಸತ್ಯ ಹೇಳುತ್ತಾರೆ. ಸಮಯ ಕಳೆದರೆ ಅದನ್ನು ಬದಲಾಯಿಸಲು ಅವಕಾಶವಾಗುತ್ತದೆ ಎನ್ನುವುದು ಈ ತಿದ್ದುಪಡಿಗಳ ಹಿಂದಿರುವ ವಿಚಾರವಾಗಿದೆ. ಸಾಕ್ಷ್ಯ ದಾಖಲಿಸಿಕೊಳ್ಳುವ ಮ್ಯಾಜಿಸ್ಟ್ರೇಟರಿಗೆ ಪ್ರಕರಣದ ಬಗ್ಗೆ ಅಧಿಕಾರವ್ಯಾಪ್ತಿ ಇರಬೇಕೆಂದೇನು ಇಲ್ಲ. ಕಲಂ 311-ಎ ತಿದ್ದುಪಡಿಯ ಅನುಸಾರ - (ಜೆಸ್ಸಿಕಾ ಪ್ರಕರಣದಲ್ಲಿ ಮನುಶರ್ಮಾ, ದೆಹಲಿಯಲ್ಲಿ ಎಸಗಿದ ಅಪರಾಧ ಕುರಿತು ಚಂಡಿಗಡದಲ್ಲಿ ತಪ್ಪೊಪ್ಪಿಗೆ ನೀಡಿದ್ದ. ಆದರೆ, ಅದನ್ನು ಅಧಿಕಾರ ವ್ಯಾಪ್ತಿಯಿಲ್ಲದ ಕಾರಣಕ್ಕಾಗಿ ಉಪಯೋಗಿಸಿಕೊಳ್ಳಲಾಗಲಿಲ್ಲ). 344-ಎ ತಿದ್ದುಪಡಿ ಕಲಂನ ಅನುಸಾರ ಯಾರಾದರೂ ಸಾಕ್ಷಿ ಹೀಗೆ ಮ್ಯಾಜಿಸ್ಟ್ರೇಟರು ದಾಖಲಿಸಿಕೊಂಡ ಹೇಳಿಕೆಗೆ ವಿರುದ್ಧವಾಗಿ ಮುಂದೆ ಸಾಕ್ಷಿ ಹೇಳಿದರೆ ಅಂತಹವರ ವಿರುದ್ಧ ಕೂಡಲೇ ಕ್ರಮಕೈಗೊಂಡು 3 ತಿಂಗಳಿನಿಂದ 2 ವರ್ಷಗಳವರೆಗಿನ ಕಾರಾಗೃಹವಾಸ ವಿಧಿಸಬಹುದು. ಈಗಿರುವ ಕಾನೂನಿನಂತೆ ವಿಚಾರಣೆ ನಡೆದು ತೀರ್ಪು ಹೊರಬಿದ್ದ ನಂತರವೇ ಈ ಕ್ರಮ ಕೈಗೊಳ್ಳಬಹುದಾಗಿದೆ.

ಆದರೆ, ಬಹುಮುಖ್ಯವಾಗಿ ಪೋಲೀಸರ ವಿರುದ್ಧವಿರುವ ಆಪಾದನೆ ಎಂದರೆ ಅವರು ಸಾಕ್ಷಿಗಳ ಮೇಲೆ ಒತ್ತಡ ತಂದು, ಬೆದರಿಕೆ ಒಡ್ಡಿ ಸುಳ್ಳು ಹೇಳಿಕೆಗಳನ್ನು, ತಪ್ಪೊಪ್ಪಿಗೆಗಳನ್ನು ಕೊಡುವಂತೆ ಮಾಡುತ್ತಾರೆ ಎನ್ನುವುದು ಹಾಗೂ ಹಣ ಅಧಿಕಾರದ ಪ್ರಭಾವಕ್ಕೆ ಒಳಗಾಗಿ ಮುಂದೆ ಅವುಗಳಲ್ಲಿ ಹಸ್ತಕ್ಷೇಪ ಮಾಡುತ್ತಾರೆ ಎನ್ನುವುದು. ಈ ಬಗ್ಗೆಯೂ ತಿದ್ದುಪಡಿಯಲ್ಲಿ ಕ್ರಮ ಕೈಗೊಂಡಿದ್ದು ಕಲಂ 161ರ ಕೆಳಗೆ ಪೋಲೀಸರು ಈಗಿನಂತೆ ಬಿಡಿ ಹಾಳೆಯಲ್ಲಿ ಹೇಳಿಕೆಯನ್ನು ಬರೆದುಕೊಳ್ಳದೇ ಬೌಂಡ್ ಪುಸ್ತಕದ ಕೇಸ್ ಡೈರಿಯಲ್ಲಿ ಇವುಗಳನ್ನು ದಾಖಲಿಸಿಕೊಳ್ಳಬೇಕು. ಎಂದರೆ ಮುಂದೆ ಅದನ್ನು ಅವರು ಬದಲಾಯಿಸಲು ಅವಕಾಶವಾಗುವುದಿಲ್ಲ ಮತ್ತು ಇಂತಹ ಹೇಳಿಕೆಗಳನ್ನು ಕೂಡಲೇ ಮ್ಯಾಜಿಸ್ಟ್ರೇಟರಿಗೆ / ಮೇಲಧಿಕಾರಿಗೆ ಕಳಿಸಿದಲ್ಲಿ ಪೋಲೀಸರು ಆಮಿಷಕ್ಕೆ ಒಳಗಾಗಲು ಅವಕಾಶವಿರುವುದಿಲ್ಲ. ಆದರೆ, ಪೋಲಿಸರೇ ಸಾಕ್ಷಿಗಳಿಗೆ ಬೆದರಿಸಿ ಹೇಳಿಕೆ ದಾಖಲಿಸಿಕೊಳ್ಳುವ ವಿರುದ್ಧ ಇದರಲ್ಲಿ ಏನೂ ರಕ್ಷಣೆ ಇರುವಂತಿಲ್ಲ. ಹಾಗೆಯೇ ಹೇಳಿಕೆ ಕೊಟ್ಟ ಕಾರಣಕ್ಕಾಗಿಯೇ ಪ್ರಾಣಭಯವಿದ್ದು ಸಾಕ್ಷಿಗಳ ಪ್ರಾಣರಕ್ಷಣೆಗಾಗಿ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವ ಬಗ್ಗೆಯೂ ತಿದ್ದುಪಡಿ ಮೌನವಾಗುಳಿದಿದೆ. ಈ ಬಗ್ಗೆಯೂ ಗಮನ ಹರಿಸಿ ಸಾಕ್ಷಿಗಳಿಗೆ ರಕ್ಷಣೆ ಒದಗಿಸುವುದೂ ಸರ್ಕಾರದ / ನ್ಯಾಯಾಲಯದ / ಪೋಲೀಸರ ಕರ್ತವ್ಯವಾಗಿದೆ. ಅದರಂತೆಯೇ ನ್ಯಾಯಾಲಯದಲ್ಲಿನ ವಿಳಂಬ ತಪ್ಪಬೇಕು. ಪೋಲೀಸರಿಗೆ ಹೇಳಿಕೆ ಕೊಟ್ಟ ಎಷ್ಟೋ ವರ್ಷಗಳ ನಂತರ ವಿಚಾರಣೆ ನಡೆದಲ್ಲಿ ಘಟನೆಯ ವಿವರಗಳು ಮರೆತು ಹೋಗಿರುತ್ತವೆ. ಆಗ ಪಾರ್ಟಿ-ಸವಾಲಿನಲ್ಲಿ ಸಾಕ್ಷಿ ವಿಫಲವಾಗುವ ಅವಕಾಶವಿರುತ್ತದೆ. ಆಗಲೂ ಅದು ವಿರುದ್ಧ ಸಾಕ್ಷ್ಯ ಎನಿಸಿ ಶಿಕ್ಷೆಗೆ ಗುರಿಯಾಗಲು ಅವಕಾಶವಾಗುತ್ತದೆ, ವಿಳಂಬದ ಕಾರಣದಿಂದಾಗಿಯೇ ಹೊರತು, ಆಮಿಷ / ಬೆದರಿಕೆಯಿಂದಾಗಿ ಅಲ್ಲದಿರಬಹುದು. ಇನ್ನಷ್ಟು ತೀವ್ರಗತಿಯ ನ್ಯಾಯಾಲಯಗಳು ಸ್ಥಾಪನೆಗೊಂಡು ಘಟನೆ ನಡೆದ 1 ವರ್ಷದ ಒಳಗೆ ವಿಚಾರಣೆ ನಡೆದು ತೀರ್ಪು ಹೊರಬಂದಲ್ಲಿ ಹೆಚ್ಚಿನ ಪ್ರಕರಣಗಳಲ್ಲಿ ನ್ಯಾಯ ಸಿಗುತ್ತದೆ. ನಿಜವಾದ ಅಪರಾಧಿಗಳಿಗೆ ಶಿಕ್ಷೆಯಾಗುತ್ತದೆ. ನಿರಪರಾಧಿಗಳು ಬೇಗ ದೋಷಮುಕ್ತರಾಗುತ್ತಾರೆ. ಇವೆಲ್ಲದರೊಂದಿಗೆ ನ್ಯಾಯಾಧೀಶರ ಸಾಮರ್ಥ್ಯ ಪ್ರಾಮಾಣಿಕತೆ ಕೂಡಾ ಮುಖ್ಯ. ❑❑

ಮಲೇರಿಯಾ ನಿಯಂತ್ರಣದಲ್ಲಿ ಸಮುದಾಯದ ಸಹಭಾಗಿತ್ವ

ಮಲೇರಿಯ ರೋಗವು ಹರಡದಂತೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಿ.

- ಯಾವುದೇ ಜ್ವರ ಮಲೇರಿಯ ಇರಬಹುದು, ಆದಷ್ಟು ಶೀಘ್ರವಾಗಿ ರಕ್ತ ಪರೀಕ್ಷೆ ಮಾಡಿಸಿ ಕ್ಲೋರೋಕ್ವಿನ್ ಗುಳಿಗೆಗಳನ್ನು ತೆಗೆದುಕೊಳ್ಳಿ.
- ಮಲೇರಿಯ ಎಂದು ರಕ್ತ ಪರೀಕ್ಷೆಯಲ್ಲಿ ಖಚಿತಪಟ್ಟಲ್ಲಿ ತಪ್ಪದೇ ತೀವ್ರ ಚಿಕಿತ್ಸೆ ಪಡೆಯಿರಿ. ಈ ಚಿಕಿತ್ಸೆಯ ವಿವರಗಳು ಹಾಗೂ ಗುಳಿಗೆಗಳು ಆರೋಗ್ಯ ಕಾರ್ಯಕರ್ತರಲ್ಲಿ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ದೊರಕುತ್ತದೆ.
- ಶಿಶುಗಳು ಮತ್ತು ಗರ್ಭಿಣಿಯರಿಗೆ ಮಲೇರಿಯ ರೋಗವು ಆತಂಕಕಾರಿಯಾಗಿದ್ದು ಅಂತಹವರು ಯಾವುದೇ ಜ್ವರವಿರಲಿ, ತಡಮಾಡದೇ ವೈದ್ಯರ ಸಲಹೆ ಪಡೆಯುವುದು.
- ನೀರು ಶೇಖರಣಾ ತೊಟ್ಟಿಗಳನ್ನು ಭದ್ರವಾದ ಮುಚ್ಚಳದಿಂದ ಯಾವಾಗಲೂ ಮುಚ್ಚಿರಬೇಕು. ವಾರಕ್ಕೊಮ್ಮೆ ನೀರನ್ನು ಸಂಪೂರ್ಣವಾಗಿ ಖಾಲಿ ಮಾಡಿ, ಒಣಗಿಸಿ ಮತ್ತೆ ಭರ್ತಿ ಮಾಡಿಕೊಂಡಲ್ಲಿ ಇಂತಹ ನೀರು ಶೇಖರಣೆಗಳಲ್ಲಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಬಹುದು.
- ಆರೋಗ್ಯ ಇಲಾಖೆಯು ಕೈಗೊಳ್ಳುವ ಕೀಟನಾಶಕ ಸಿಂಪಡಣಾ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ.
- ಸದಾ ನೀರಿರುವ ಕೆರೆ, ಕುಂಟೆ, ಬಾವಿ, ತೋಟದ ಕಾರಂಜಿಗಳು ಮುಂತಾದ ತಾಣಗಳಲ್ಲಿ ಸೊಳ್ಳೆಯ ಮರಿಗಳನ್ನು ತಿನ್ನುವ ಗ್ಯಾಂಬೂಸಿಯ ಮತ್ತು ಗಪ್ಪಿ ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದು.
- ಮನೆಯ ಕಿಟಕಿ ಬಾಗಿಲುಗಳಿಗೆ ಕೀಟ ತಡೆಗಟ್ಟುವ ಜಾಲರಿಗಳನ್ನು ಅಳವಡಿಸಿಕೊಳ್ಳಿ.
- ಮಲಗುವಾಗ ತಪ್ಪದೇ ಸೊಳ್ಳೆ ಪರದೆಯನ್ನು ಉಪಯೋಗಿಸಿ.
- ಸಂಜೆ ವೇಳೆ ಬೇವಿನ ಹೊಗೆ ಹಾಕುವುದು, ಸಾಮ್ರಾಣಿ ಧೂಪ ಹಾಕುವುದು ಹಾಗೂ ರಾತ್ರಿವೇಳೆ ಇತರ ಸೊಳ್ಳೆ ನಿರೋಧಕ ವಿಧಾನಗಳನ್ನು ಬಳಸಿ ಸೊಳ್ಳೆ ಕಡಿತದಿಂದ ದೂರವಿರಿ.
- ಹರಿಯದೇ ನಿಂತ ನೀರು-ಸೊಳ್ಳೆ ಉತ್ಪತ್ತಿಯ ತವರು. ಮನೆಯ ಸುತ್ತ ಮುತ್ತ ನೀರು ನಿಲ್ಲದಂತೆ ಎಚ್ಚರ ವಹಿಸಿ ಸೊಳ್ಳೆಗಳ ಉತ್ಪತ್ತಿಯನ್ನು ತಡೆಗಟ್ಟಿರಿ.

ಶೀಘ್ರ ಪತ್ತೆ - ತ್ವರಿತ ಚಿಕಿತ್ಸೆಯಿಂದ ಸಾವು ನೋವುಗಳನ್ನು ತಡೆಗಟ್ಟಲು ಖಂಡಿತ ಸಾಧ್ಯ.

ಕರ್ನಾಟಕ ವಾರ್ತೆ.
Karnataka Information

ಸ್ವಸ್ಥ ಸಮಾಜ ಕಟ್ಟುತ್ತಿರುವ ಶ್ರೀಮತಿ ಮೀನಾಜೈನ್

- ಶಾಂತಾ ನಾಗರಾಜ್

''ಡಾಕ್ಟರ್‌ಗಳು ಕೈ ಬಿಟ್ಟ ಸಾವಿನ ಮನೆಯ ಬಾಗಿಲಲ್ಲಿ ನಿಂತಿರುವ ಕ್ಯಾನ್ಸರ್ ಪೀಡಿತ ಮಗುವಿಗೆ ಕೆಲವು ಕ್ಷಣಗಳಾದರೂ ಖುಷಿಯನ್ನು ಕೊಟ್ಟಿದ್ದೀರಾ''?

''ಪಿ.ಯು.ಸಿ ಮತ್ತು ಸಿ.ಇ.ಟಿ.ಗಳನ್ನು ಮಹಾಯುದ್ಧವೆನ್ನುವಂತೆ ಜಯಿಸಿ, ಇಂಜನಿಯರಿಂಗ್ ನಾಲ್ಕನೇ ಸೆಮಿಸ್ಟರ್‌ನಲ್ಲಿರುವ ಅಪರಿಚಿತರ ಮಗ ಕಾಲೇಜನ್ನೇ ಬಿಟ್ಟು ಮನೆಯಲ್ಲಿ ಕುಳಿತಾಗ ಅವನನ್ನು ಒಲಿಸಿ ಮತ್ತೆ ಕಾಲೇಜಿಗೆ ಹೋಗುವಂತೆ ಮಾಡಿದ್ದೀರಾ?''

''ಆಕ್ಸಿಡೆಂಟ್ ಮಾಡಿಕೊಂಡ ಮಗನಿಗೆ ಗಾಯದ ರಕ್ತ ಒರೆಸದೇ 'ನನ್ನ ಮಾತು ಕೇಳದೇ ಗಾಡಿ ಓಡಿಸಿ ಮಾಡಿಕೊಂಡೆಯಲ್ಲ' ಎಂದು ಕಿರುಚುವ ಅಮ್ಮನನ್ನು ಮೆದುಮಾಡಿ ಮಗನಿಗೆ ಹಿತವಾಗುವಂತೆ ಮಾಡಿದ್ದೀರಾ?''

''ಸ್ವಭಾವತಃ ಒಳ್ಳೆಯವರಾದರೂ ತಮ್ಮದೇ ಹಠದಲ್ಲಿ ಬೇರೆಯಾದ ದಂಪತಿಯನ್ನು, ಅತ್ತೆಸೊಸೆಯರನ್ನು, ತಾಯಿ ಮಕ್ಕಳನ್ನು ಅಪ್ಪ ಮಕ್ಕಳನ್ನು, ಅಣ್ಣತಮ್ಮಂದಿರನ್ನು ಮನವೊಲಿಸಿ ಒಂದು ಮಾಡಿದ್ದೀರಾ?''

ನಾನು ಈ ರೀತಿಯ ನೂರು ಪ್ರಶ್ನೆಯನ್ನು ಕೇಳಬಲ್ಲೆ. ನನ್ನನ್ನೂ ಸೇರಿದಂತೆ ನಾವೆಲ್ಲಾ ಈ ಪ್ರಶ್ನೆಗಳಿಗೆ ಕೊಡುವ ಉತ್ತರ ಒಂದೇ ''ಇಲ್ಲ'' ಎಂದು. ಆದರೆ ಈ ಎಲ್ಲ ಪ್ರಶ್ನೆಗೂ ಎದೆತಟ್ಟಿ ''ಹೌದು'' ಎಂದು ಉತ್ತರಿಸುವ ಮಹಿಳೆಯೊಬ್ಬರಿದ್ದಾರೆ ಅವರೇ ಶ್ರೀಮತಿ ಮೀನಾ ಕೆ. ಜೈನ್. ''ಯಾರೀ ಮೀನಾಜೈನ್?'' ನಿಮ್ಮ ಹುಬ್ಬು ಮೇಲೇರಿತೇ? ನನಗೆ ಗೊತ್ತು, ಸೂಜಿ ಮೊನೆಯಷ್ಟು ಸೌಂದರ್ಯವಿರುವ, ಆನೆಗಾತ್ರದ ಮೇಕಪ್ ಬಳಿದು ಟಿ.ವಿ.ಯಲ್ಲಿ ಮುಖತೋರಿಸುವ ಜನರನ್ನು ಅವರೆಲ್ಲೇ ಸಿಕ್ಕಲಿ ತಕ್ಷಣ ಗುರುತಿಸುತ್ತೀರಿ. ಪತ್ರಿಕೆಯ ಮುಖಪುಟದಲ್ಲಿ ರಾರಾಜಿಸುವ ರಾಜಕಾರಣಿಯರ ಕುಲಗೋತ್ರವೆಲ್ಲಾ ತಿಳಿದಿದೆ ನಿಮಗೆ. ಬ್ಯಾಟಿನ ಬೆನ್ನಲ್ಲೇ ಅನೀತಿಯುತವಾಗಿ ನೋಟುಗಳನ್ನೆಣಿಸುವ ಆಟಗಾರರು ನಿಮ್ಮ ಪಾಲಿನ ದೇವತೆಗಳು!! ಈ ಯಾರಿಂದಲೂ ಸಾಮಾನ್ಯರಿಗೆ ಚಿಕ್ಕಾಸಿನ ಲಾಭವಿಲ್ಲವೆನ್ನುವುದನ್ನು ಅರಿತೂ ಅವರನ್ನೂ ಆದರಿಸುತ್ತೇವೆ ಪೂಜಿಸುತ್ತೇವೆ. ಆದರೆ ನೂರಾರು ಹೃದಯಗಳಿಗೆ ತಂಪೆರೆಯುವ ನಮ್ಮ ಮುಂದಿನ ಪೀಳಿಗೆಗೆ ಮಾದರಿಯಾಗಬೇಕಾದ ಇಂಥಾ ಬೆರಳೆಣಿಕೆಯ ಉತ್ತಮ ಚೈತನ್ಯಗಳು ಎಲೆಮರೆಯ ಕಾಯಿಗಳಾಗೇ ಉಳಿದುಬಿಡುತ್ತವೆ. ಅದು ನಿಮ್ಮ ತಪ್ಪಲ್ಲ ಬಿಡಿ. ನಮ್ಮ ಒಟ್ಟು ವ್ಯವಸ್ಥೆಯಲ್ಲಿರುವ ದೊಡ್ಡ ದೋಷವೇ ಇದು.

ಯಾರಿಗಾದರೂ ಹೀಗೆ ಸಮಾಜಸೇವೆ ಮಾಡುವ ಗುಣ ಹೇಗೆ ಬರುತ್ತದೆ ಎನ್ನುವುದಕ್ಕೆ ಶ್ರೀಮತಿ ಮೀನಾ ತುಂಬ ಸೈದ್ಧಾಂತಿಕವಾಗಿ ಉತ್ತರಿಸುತ್ತಾರೆ. ''ನಮ್ಮ ತಂದೆ, ನಮ್ಮ ರಾಜಾಸ್ಥಾನದ ಸಿದ್ಧಮಾದರಿಯಾಗಿ ವ್ಯಾಪಾರ ವ್ಯವಹಾರದಲ್ಲಿ ತೊಡಗಿದ್ದರು. ನಾವಾಗ ಮೈಸೂರಿನಲ್ಲಿದ್ದೆವು. ಒಬ್ಬ ಅಣ್ಣ ಮತ್ತು ಐದು ಮಂದಿ ಹೆಣ್ಣುಮಕ್ಕಳ ದೊಡ್ಡ ಕುಟುಂಬ ನಮ್ಮದು. ಹೆಣ್ಣು ಮಕ್ಕಳಲ್ಲಿ ನಾನೇ ಐದನೆಯವಳು. ಇಷ್ಟು ಮಕ್ಕಳಿದ್ದೂ ಸಾಕಷ್ಟು ಸ್ಥಿತಿವಂತರಾದ ನನ್ನಮ್ಮ ಪ್ರತಿದಿನ ಅನಾಥಾಶ್ರಮದಿಂದ ಒಂದು ಕುರುಡು ಹುಡುಗಿಯನ್ನೂ ಮತ್ತೊಬ್ಬ ಹುಡುಗಿಯನ್ನೂ ನಮ್ಮ ಮನೆಗೆ ಬರುವಂತೆ ಮಾಡುತ್ತಿದ್ದರು. ನಾವೆಲ್ಲಾ ಅವರೊಂದಿಗೆ ಹೊಂದಿಕೊಳ್ಳ ಬೇಕಾಗುತ್ತಿತ್ತು. ನಮ್ಮ ಎಲ್ಲವನ್ನೂ (ಅಂದರೆ ಬಟ್ಟೆ, ಊಟ, ಪುಸ್ತಕ, ಇತರೆ ವಸ್ತುಗಳು) ಅವರೊಂದಿಗೆ ಹಂಚಿಕೊಳ್ಳಬೇಕಾಗುತ್ತಿತ್ತು. ಗೊಣಗಿಕೊಂಡಲ್ಲ ಖುಷಿಯಾಗಿ! ನಮಗದೇ ಅಭ್ಯಾಸವಾಗಿ ಹೋಯಿತು. ಒಂದೊಮ್ಮೆ ಮನೆಗೆ ಹೊರಗಿನವರು ಬಾರದೇ ಹೋದರೆ ನಮಗೆ ಬೇಸರವಾಗುತ್ತಿತ್ತು.'' ಇದು ಮೀನಾರವರ ಬಾಲ್ಯ. ಹೀಗೆ 'ಬೆಳೆಯುವ ಕುಡಿಯ ಸಿರಿ ಮೊಳಕೆಯಲ್ಲೇ ನೋಡು' ಎಂಬಂತೆ ಪರೋಪಕಾರವೆನ್ನುವುದು ಹುಟ್ಟಿನ ಜೊತೆಯಲ್ಲೇ ಬಂತು.

ಮೀನಾರ ಕಾಲೇಜು ವಿದ್ಯಾಭ್ಯಾಸ ಬೆಂಗಳೂರಲ್ಲಿ. ಹೋಮ್‌ಸೈನ್ಸ್ ವಿಭಾಗದಲ್ಲಿ ಗಲಾಟೆ ಮಾಡಿ ಸೈಕಾಲಜಿ ಮತ್ತು ಸಾಹಿತ್ಯವನ್ನು ಆರಿಸಿಕೊಂಡ ಮೊದಲ ಬ್ಯಾಚ್ ನಮ್ಮದೆ ಎಂದು ಮೀನಾ ಖುಷಿಯಿಂದ ಹೇಳುತ್ತಾರೆ. ಈ ವಿಷಯಗಳನ್ನು ಆರಿಸಿಕೊಂಡು ಓದಿದ್ದು ಅವರಿಗೆ ತುಂಬ ಉಪಯುಕ್ತವಾಗಿದೆ. ಹೋಮ್‌ಸೈನ್ಸಿನ ಅಚ್ಚುಕಟ್ಟು, ಸಾಹಿತ್ಯದ ಸೊಬಗು ಮತ್ತು ಸೈಕಾಲಜಿಯ ಮನುಷ್ಯ ಪ್ರೀತಿ ಅವರನ್ನು ಸನ್ಮಾರ್ಗದಲ್ಲಿ ನಡೆಸಿದೆ. ಅವರ ಆಸಕ್ತಿ ಉತ್ಸಾಹಗಳನ್ನು ಅವರ ಉಪನ್ಯಾಸಕರು ಸೈಕಾಲಜಿಯಲ್ಲಿ ಎಂ.ಎಸ್ಸಿ. ಮಾಡುವಂತೆ ಹುರಿದುಂಬಿಸಿದರು. ಆದರೆ ಈಗ್ಗೆ ಇಪ್ಪತ್ತು ವರ್ಷದ ಹಿಂದೆ ಸಾಂಪ್ರದಾಯಕ ಕುಟುಂಬದಲ್ಲಿದ್ದ ಭಯವೊಂದೇ 'ಮಗಳು

ವಿಪರೀತ ಓದಿ ಬಿಟ್ಟರೆ ಗಂಡು ಸಿಗುವುದಿಲ್ಲ' ಎನ್ನುವುದು. ಮೀನಾರ ತಾಯಿಯೂ ಇದಕ್ಕೆ ಹೊರತಲ್ಲವಲ್ಲ ? ಮೀನಾ ಸೈಕಾಲಜಿಯಲ್ಲಿ ಎಂ.ಎಸ್ಸಿ ಮಾಡುವುದು ತಪ್ಪಿಹೋಯಿತು.

ಪುಟ್ಟ ಅವಕಾಶವೊಂದು ತಾನಾಗಿಯೇ ಹುಡುಕಿಕೊಂಡು ಬಂತು. ದಿನ ಪತ್ರಿಕೆಯಲ್ಲಿ ಒಂದು ಜಾಹೀರಾತು ಅವರ ಮನಸೆಳೆಯಿತು. ಅದು ಮಾನಸಿಕವಾಗಿ ಹಿಂದುಳಿದ ಮಕ್ಕಳ ಟೀಚರ್ಸ್ ಟ್ರೈನಿಂಗ್ ಕೋರ್ಸ್. ಮೀನಾ ತಡಮಾಡದೇ ಈ ಕೋರ್ಸ್‌ಗೆ ಸೇರಿ ಬಿಟ್ಟರು. ಈ ಜ್ಞಾನ ನದಿಯೇ ಅವರನ್ನು ಮುಂದೆ ಮಹಾಸಾಗರದತ್ತ ಕೊಂಡೊಯ್ದದ್ದು. ಹಲವು ವರ್ಷ ಅಲ್ಲಿ ಇಲ್ಲಿ ಕೆಲಸ ಮಾಡಿದ ಮೀನಾ ತಮ್ಮದೇ ಒಂದು ಸೇವಾ ಸಂಸ್ಥೆಯನ್ನು ಕಟ್ಟುವ ಕನಸು ಕಂಡರು. ಸಮಾನ ಮನಸ್ಕ ಗೆಳತಿಯರು ಸೇರಿ ಕಟ್ಟಿದ ಸಂಸ್ಥೆಯೇ 'ಸೃಷ್ಟಿ. ಈಗ ಅದು ಬೃಹದಾಕಾರವಾಗಿ ಬೆಳೆದಿದೆ. ರಾಜ್ಯಮಟ್ಟದಲ್ಲಷ್ಟೇ ಅಲ್ಲ ರಾಷ್ಟ್ರಮಟ್ಟದಲ್ಲೂ ಉತ್ತಮ ಹೆಸರು ಮಾಡಿರುವ ಸಂಸ್ಥೆ ಅದು. ಒಂದಲ್ಲ ಎರಡಲ್ಲ ಹತ್ತಾರು ವರ್ಷಗಳ ಕಾಲ ಅಹರ್ನಿಶಿ ದುಡಿದಿರುವ ಮೀನಾ'' 'ಸೃಷ್ಟಿ' ನನ್ನ ಕನಸಾಗಿತ್ತು, ನನ್ನ ಉಸಿರಾಗಿತ್ತು ನಿಂತರೆ ಕುಳಿತರೆ ಅದರ ಭಾರ ನನ್ನ ಬೆನ್ನಿಗಿರುತ್ತಿತ್ತು. ಉಳಿದ ನನ್ನ ಜೊತೆಗಾರರು ಹೊಸತನ್ನು ಏನನ್ನೂ ಸ್ವೀಕರಿಸದ ಮಟ್ಟಕ್ಕೆ ತಲುಪಿದರು. ಸದಾ ಹೊಸತರ ಅವಿಷ್ಕಾರಕ್ಕೆ ಹಾತೊರೆಯುವ ನನಗೆ ಮತ್ತೇನಾದರೂ ಮಾಡುವ ಮನಸ್ಸಾಯಿತು. ಅಲ್ಲಿಂದ ಹೊರಬಂದು 'ಎಂಬಿ ಸೈಕೊ ಎಜುಕೇಷನಲ್ ಕನ್‌ಸಲ್ಟೆಂಟ್ ಸರ್ವೀಸ್' ಪ್ರಾರಂಭಿಸಿದೆ'' ಎನ್ನುತ್ತಾರೆ.

ಮೀನಾರವರ ಕಾರ್ಯಾಗಾರ ಪ್ರವೇಶಿಸಿದರೆ ಅರಿಯದ ಒಂದು ಲೋಕವನ್ನು ಹೊಕ್ಕಂತಾಗುತ್ತದೆ. ಪುಟ್ಟ ಎರಡು ಮಕ್ಕಳನ್ನು ಸಂಭಾಳಿಸುತ್ತಿರುವ ಟೀಚರ್ ಅವರಿಗೆ ಹೇಳಿದ್ದನ್ನೇ ಒಂದಿಷ್ಟೂ ಬೇಸರವಿಲ್ಲದೇ ಹೇಳಿ ಕೊಡುತ್ತಿರುತ್ತಾರೆ. ಆ ಚಲಿಸುತ್ತ ಒಂದೇ ಪದವನ್ನು ಮತ್ತೆ ಮತ್ತೆ ಹೇಳಿ ಕೊಡುವುದು ಎಷ್ಟು ಕಷ್ಟವೆನ್ನುವುದನ್ನು ಊಹಿಸಿಕೊಳ್ಳಿ. ಸ್ವತಃ ತಾಯಿಗೂ ಈ ತಾಳ್ಮೆ ಇರುವುದಿಲ್ಲ. ಮತ್ತೊಂದು ಕೊಠಡಿಯಲ್ಲಿ ಒಂದು ದೊಡ್ಡ ಟೇಬಲ್ ಅದರ ಸುತ್ತಾ ನಾಲ್ಕಾರು ವಿವಿಧ ವಯಸ್ಸಿನ ಮಕ್ಕಳು ಮತ್ತು ಒಬ್ಬ ಮೇಡಂ. ಹತ್ತು ವಯಸ್ಸಿನ ಹುಡುಗಿಯೊಂದು ತಾನೇ ಬಳಿದ ಬಣ್ಣಗಳ ಹೆಸರು ತಿಳಿಯದೇ ಒದ್ದಾಡುತ್ತಿದೆ. ಮೇಡಂ ಹತ್ತಾರುಸಲ ಹೇಳಿಸುತ್ತಾರೆ. ಹತ್ತನೇ ತರಗತಿಯ ಹುಡುಗನೊಬ್ಬ ಐದು ಪ್ಲಸ್ ಐದು ಎಂದರೆ ಸೊನ್ನೆ ಎಂದೇ ವಾದಿಸುತ್ತಿದ್ದಾನೆ. ಮತ್ತೊಬ್ಬ ಅದೇ ವಯಸ್ಸಿನ ಹುಡುಗಿ ಸರಸರನೇ ಹೋಂವರ್ಕ್ ಬರೆಯುತ್ತಿದ್ದಾಳೆ. ಆದರೆ ಅವಳಿಗೆ ಓದುವುದು ಮತ್ತು ಅರ್ಥಮಾಡಿಕೊಳ್ಳುವುದು ಕಷ್ಟ ಹೀಗೇ ಒಬ್ಬೊಬ್ಬರ ಸಮಸ್ಯೆ ಒಂದೊಂದು ರೀತಿ. ಎಲ್ಲರಿಗೂ ಆ ಟೀಚರ್ ಎನ್ನುವ ತಾಳ್ಮೆಯ ಮೂರ್ತಿ ಅವರವರದೇ ಮನಸ್ಸಿನ ನೆಲೆಯಲ್ಲಿ ನಿಂತು ಕಲಿಸುತ್ತಿದ್ದಾರೆ. ಒಂದು ನಿಮಿಷ ಕಲ್ಪಿಸಿಕೊಳ್ಳಿ ಈ ಮಕ್ಕಳನ್ನು ಅರವತ್ತು ಜನ ಒಂದು ತರಗತಿಯಲ್ಲಿರುವ ಶಾಲೆ ಎನ್ನುವ ಕಾರ್ಖಾನೆಗೆ ತಳ್ಳಿಬಿಟ್ಟರೆ ಆ ಚುರುಕು ಮಕ್ಕಳ ಕೆಳಗೆ ಈ ಮಕ್ಕಳು ಅಪ್ಪಚ್ಚಿಯಾಗಿ ಹೋದಾರು. ಅದಕ್ಕೇ ಇದು ವಿಶೇಷ ಶಾಲೆ !

ಇವರೆಲ್ಲರೂ ಪೂರಾ ಮಾನಸಿಕ ಅಸ್ವಸ್ಥರಲ್ಲ. ಕಲಿಕೆಯಲ್ಲಿ ಸ್ವಲ್ಪ ಹಿಂದೆ ಬಿದ್ದವರೂ ನೆನಪಿನ ಶಕ್ತಿ ಸಾಧಾರಣ ಮಟ್ಟಕ್ಕಿಂತಾ ಕಡಿಮೆಯಿರುವವರು. ಆದರೂ ಹೆತ್ತವರಿಗೆ ಚಿಂತೆ ತಂದವರು. ಇಂಥವರನ್ನು ಮುಖ್ಯವಾಹಿನಿಗೆ ತುರುವುದೇ ಮೀನಾರವರ ಗುರಿ. ಅಲ್ಲದೇ ಮೀನಾ ಹೇಳುತ್ತಾರೆ'' ಇವತ್ತು ನಮ್ಮ ಶಾಲೆಗಳ ಸಿದ್ಧಸೂತ್ರವೇ ಯಾಂತ್ರಿಕವಾಗಿದೆ. ಎಲ್ಲ ಮಕ್ಕಳನ್ನೂ (ಒಂದೇ ಅಚ್ಚಿಗೆ ಎರಕ ಹೊಯ್ದು ಒಂದೇ ರೀತಿಯ ಬೊಂಬೆ ತೆಗೆಯುವಂತೆ) ಒಂದೇ ರೀತಿಯ ಸಿಲಬಸ್‌ಗೆ ಅಳವಡಿಸಲಾಗುತ್ತದೆ. ಇಲ್ಲಿ ಮಕ್ಕಳಿಗೆ ಇಷ್ಟಪಟ್ಟು ಕಲಿಯುವ ಸ್ವಾತಂತ್ರವೇ ಇಲ್ಲ. ಮತ್ತು ಎಲ್ಲ ಮಕ್ಕಳ ಐ.ಕ್ಯು. (ಇಂಟಲಿಜೆಂಟ್ ಕೋಶಂಟ್) ಒಂದೇ ರೀತಿ ಇರುತ್ತದೆ ಎಂದು ಭಾವಿಸುವುದೇ ತಪ್ಪು. ಇದನ್ನು ತಂದೆ-ತಾಯಿಗಳು ಮರೆಯುತ್ತಾರೆ, ಉಪಾಧ್ಯಾಯರೂ ಮರೆಯುತ್ತಾರೆ. ಹೀಗಾಗಿಯೇ ಬಾಲ್ಯದಲ್ಲಿ ಚುರುಕಾಗಿದ್ದ ಮಕ್ಕಳೂ ದೊಡ್ಡವರಾಗುತ್ತಾ ಕೆಲವರು ಓದಿನಲ್ಲಿ ಹಿಂದೆ ಬೀಳುತ್ತಾರೆ. ಅಂಥವರಿಗೆ ವಿಶೇಷವಾದ ಕೋಚಿಂಗ್ ಅಗತ್ಯವಿದೆ. ಮುಂದುವರೆದು ಮೀನಾ ಹೇಳುವುದೇನೆಂದರೆ ಮಗುವಿಗೆ ಸ್ವಲ್ಪ ಜ್ವರ ಬಂದರೆ, ಬಿದ್ದು ಸ್ವಲ್ಪ ದೊಡ್ಡ ಗಾಯವಾದರೆ ತಂದೆತಾಯಿ ತಕ್ಷಣ ಡಾಕ್ಟರ್ ಹತ್ತಿರ ಓಡುತ್ತಾರೆ. ಅದೇ ಮಗು ಮಂಕಾದರೆ, ಕಲಿಕೆಯಲ್ಲಿ ಹಿಂದೆ ಬಿದ್ದರೆ, ಯಾರ ಜೊತೆಯಲ್ಲೂ ಬೆರೆಯದೇ ಒಂಟಿಯಾಗಿದ್ದರೆ ಹೊಡೆದೂ ಬಡಿದೂ ಸರಿ ಮಾಡಲು ನೋಡುತ್ತಾರೆ. ಪರಿಸ್ಥಿತಿಯನ್ನು ಸಾಕಷ್ಟು ಕೆಡೆಸಿ ಕಡೆಯ ಪ್ರಯತ್ನವೆಂಬಂತೆ ನಮ್ಮ ಹತ್ತಿರ ಬರುತ್ತಾರೆ. ಆ ಹೊತ್ತಿಗೆ ಮಗುವಿನ ಬುದ್ಧಿಗೆ ಸಾಕಷ್ಟು ಡ್ಯಾಮೇಜ್ ಆಗಿರುತ್ತದೆ. ಸ್ವಲ್ಪ ಮೊದಲೇ ಬಂದಿದ್ದರೆ ಕೆಲವು ವಾರಗಳಲ್ಲಿ ಸರಿ ಮಾಡಬಹುದಾದ ಸಮಸ್ಯೆಯನ್ನು ವರ್ಷಗಟ್ಟಲೇ ತೆಗೆದುಕೊಳ್ಳುವ ಹಾಗೆ ಮಾಡಿರುತ್ತಾರೆ. ಇದಕ್ಕೆಲ್ಲಾ ಕಾರಣ ಈ ಬಗ್ಗೆ ತಿಳುವಳಿಕೆಯ ಕೊರತೆ.''

ಮೀನಾರವರ ಪ್ರಕಾರ ಈ ಬಗ್ಗೆ ತಿಳುವಳಿಕೆಯನ್ನು ಸರ್ಕಾರದ ಆರೋಗ್ಯ ಕಾರ್ಯಕ್ರಮಗಳಲ್ಲಿ ಸೇರಿಸಬೇಕು. ಪೋಲಿಯೋ ಬಗ್ಗೆ ಹೆಪಿಟೈಟಿಸ್ ಬಗ್ಗೆ ಜಾಹೀರಾತು

ನೀಡುವಂತೆ 'ಮೆಂಟಲ್ ಹೆಲ್ತ್ ಕೇರ್' ಬಗ್ಗೆಯೂ ಜಾಹೀರಾತುಗಳನ್ನು ಕೊಡಬೇಕು. ಔಷಧಿಯ ಕಂಪನಿಗಳು ಯಾವಯಾವುದಕ್ಕೋ ಬುಕ್‌ಲೆಟ್‌ಗಳನ್ನು ಮಾಡಿಸುತ್ತದೆ. ಅವರೂ ಕೂಡಾ ಮೆಂಟಲ್ ಹೆಲ್ತ್ ಬಗ್ಗೆ ಒಳ್ಳೆ ತಿಳುವಳಿಕೆಯನ್ನು ಕೊಡಲು ಸಾಧ್ಯವಿದೆ. ನಿಮ್ಹಾನ್ಸ್ ಸಂಸ್ಥೆ ಸಹ ಈ ಬಗ್ಗೆ ಅಲ್ಲಲ್ಲಿ ಕಾರ್ಯಕ್ರಮಗಳನ್ನು ನಡೆಸಬೇಕು. ಆಕಾಶವಾಣಿ, ಜನಪ್ರಿಯ ಎಫ್.ಎಂ. ರೇಡಿಯೋಗಳು ಸಹ ನಿಮ್ಹಾನ್ಸ್‌ನಿಂದ ಮೆಂಟಲ್ ಹೆಲ್ತ್ ಬಗ್ಗೆ ಎರಡೆರಡು ವಾಕ್ಯಗಳನ್ನಾದರೂ ಬರೆಸಿ ಆಗಾಗ್ಗೆ ಜಾಹೀರಾತು ಮಾದರಿಯಲ್ಲಿ ಹೇಳುತ್ತಿರಬೇಕು. ಇಂಥ ಒಂದು ಕ್ರಾಂತಿರೀತಿಯ ಪ್ರಚಾರದ ಅಗತ್ಯ ಹಿಂದೆಂದಿಗಿಂತಲೂ ಇಂದು ತುಂಬಾ ಇದೆ. ಆದರೆ ಇದಿಷ್ಟೇ ಸಾಕಾಗುವುದಿಲ್ಲ. ನಿಮ್ಹಾನ್ಸ್‌ನ ಒಂದು ವರದಿಯ ಪ್ರಕಾರ ಭಾರತದ ಜನಸಂಖ್ಯೆಗೆ ಅನುಗುಣವಾಗಿ ಸಾಧಾರಣ ವೈದ್ಯರ ಸಂಖ್ಯೆ ಇರುವಂತೆ ಮನೋವೈದ್ಯರ ಸಂಖ್ಯೆ ಇಲ್ಲ. ಅದಕ್ಕೂ ಮೀನಾರವರ ಬಳಿ ಸಲಹೆ ಇದೆ. ಸಾಧಾರಣ ಸಮಸ್ಯೆಗಳಿಗೆ ಪರಿಹಾರ ನೀಡಲು 'ಲೇ ಕೌನ್ಸಿಲರ್'ಗಳನ್ನು (ಮನಃಶಾಸ್ತ್ರದ ಬಗ್ಗೆ ಮೂಲಭೂತ ತಿಳುವಳಿಕೆ ಪಡೆದಿರುವವರು) ತರಬೇತಿ ಕೊಟ್ಟು ತಯಾರು ಮಾಡಬೇಕು. ಈ ಕೆಲಸ ರಾಜಧಾನಿಗಳಲ್ಲಿ ನಡೆಯುತ್ತಿದೆಯಾದರು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಇಲ್ಲವೇ ಇಲ್ಲ. ಗ್ರಾಮೀಣ ಜನರಂತೂ ಈ ವಿಚಾರದಲ್ಲೀ ತುಂಬಾ ಕಷ್ಟವನ್ನು ಅನುಭವಿಸುತ್ತಿದ್ದಾರೆ.

ಮೀನಾ ಈ ದಿಸೆಯಲ್ಲಿ ಒಂದು ಪುಟ್ಟ ಪ್ರಯತ್ನವನ್ನು ಕೆಲವೇ ವರ್ಷಗಳಿಂದ ಪ್ರಾರಂಭಿಸಿ ಬಿಟ್ಟಿದ್ದಾರೆ. ಇದಕ್ಕೆ ಅವರ ಅಣ್ಣನ ಮಗ ಶ್ರೀ ನಿತಿನ್‌ಜೈನ್‌ರವರ ಸಹಕಾರವಿದೆ. ನಿತಿನ್‌ರವರ ಕನಸುಗಳು ಮೀನಾರಿಗಿಂತಾ ಹಿರಿದಾಗಿವೆ. ಅವರೆನ್ನುತ್ತಾರೆ. ''ಈಗ ಚಿಕ್ಕದಾಗಿ ಈ ಸೆಂಟರ್ ತೆರೆದಿದ್ದೇವೆ. ಇದು ಸದೃಢವಾಗಿ ಬೆಳೆದ ನಂತರ ದೊಡ್ಡ ಶಾಲೆಯನ್ನು ಶುರು ಮಾಡುವ ಕನಸಿದೆ. ಹೀಗೆ ಡೆವಲಪ್‌ಮೆಂಟಲ್ ಡಿಲೇ ಇರುವ ಮಕ್ಕಳನ್ನು ಅವರವರ ಮೆಂಟಲ್ ಸ್ಟೇಟಸ್‌ನಲ್ಲೇ ಅಭ್ಯಸಿಸುತ್ತಾ ಅವರ ತಿಳಿವನ್ನು ಹೆಚ್ಚಿಸಿ ಅವರನ್ನು ಮುಖ್ಯವಾಹಿನಿಗೆ ತರವ ಹಿರಿದಾದ ಕನಸಿದು. ''ನಿತಿನ್ ಮುಂದುವರೆದು ಹೇಳುತ್ತಾರೆ'' ನಾವು ಈ ಮೂಲಕ ವ್ಯಾಪಾರ ಮಾಡಲು ಹೊರಟಿಲ್ಲ. ನನಗೆ ನನ್ನದೇ ಆದ ವ್ಯವಹಾರವಿದೆ. ಮತ್ತು ಇದು ಚಾರಿಟಿ ಸಂಸ್ಥೆ ಸಹ ಅಲ್ಲ. ಇವತ್ತು ನಾನು ಈ ದಿಕ್ಕಿನಲ್ಲಿ ಪ್ರಯತ್ನಿಸಿದರೆ ನಮ್ಮ ಜೈನ್ ಸಮುದಾಯದಿಂದಲೇ ಲಕ್ಷಲಕ್ಷ ಹಣ ಸಂಗ್ರಹಿಸಬಹುದು. ಆದರೆ ಹೀಗೆ ಸಂಗ್ರಹಿಸಿದ ಹಣದ ವಿಲೇವಾರಿ ಎಲ್ಲಹಂತದಲ್ಲೂ ನ್ಯಾಯುತವಾಗಿಯೇ ವಿತರಣೆಯಾಗುತ್ತದೆ ಎನ್ನಲು ಬರುವುದಿಲ್ಲ. ಎಲ್ಲವನ್ನೂ ಒಬ್ಬರೇ ನಿಭಾಯಿಸುವುದಕ್ಕಾಗುವುದಿಲ್ಲ. ಎಲ್ಲೋ ಹಣ ಸೋರಿ ಹೋಗಬಹುದು. ನಮಗೆ ನಮ್ಮ ಗುರಿಗಾಗಿ ಕೆಲಸಮಾಡುವ ಬದಲು ಈ ಸೋರಿ ಹೋಗುವ ಹಣದ ಬಗ್ಗೆಯೇ ಚಿಂತೆ ಹೆಚ್ಚಾಗಿ ಈ ಪ್ರಯತ್ನವನ್ನೇ ನಿಲ್ಲಿಸಬೇಕಾಗಬಹುದು.'' ಎಂತಹ ಸತ್ಯವಾದ ಮಾತಿದು?!! ನಿತಿನ್ ಇನ್ನೂ ಯುವಕರಾದರೂ ಅತ್ಯಂತ ಅನುಭವಿಗಳಂತೆ ಚಿಂತಿಸಿದ್ದಾರೆ. ನಮ್ಮ ಅನೇಕ ಸೇವಾ ಸಂಸ್ಥೆಗಳ ದುರವಸ್ಥೆಗೆ ಭಾಷ್ಯ ಬರೆದಂತಹ ಮಾತಿದು. ಆದ್ದರಿಂದಲೇ ನಿತಿನ್‌ರ ''ಯಾರಿಗೂ ಯಾವುದೂ ಬಿಟ್ಟಿ ಬರಬಾರದು, ಅದರ ಬೆಲೆಯೇ ಹೋಗಿಬಿಡುತ್ತದೆ'' ಎನ್ನುವ ವಾದವನ್ನು ನಂಬಲೇ ಬೇಕಾಗುತ್ತದೆ. ಈ ಸಂಸ್ಥೆಯಲ್ಲಿ ಹದಿನೆಂಟು ಮಕ್ಕಳಿಗೆ ಮಿನಿಮಂ ಫೀಸು ವಿಧಿಸಿದರೆ, ಇಬ್ಬರು ಬಡವರಿಗೆ ಉಚಿತ (ಪ್ರಾಥಮಿಕ ಸದಸ್ಯತ್ವದ ಹತ್ತಿಪ್ಪತ್ತು ರೂ.ಗಳು ಕಡ್ಡಾಯ).

ಮೀನಾರವರು 'ಸ್ವಸ್ಥ ಮನಸ್ಸಿನ' ಸಮಾಜ ಕಟ್ಟುವಲ್ಲಿ ಎಲ್ಲ ದಿಕ್ಕುಗಳಲ್ಲೂ ಚಿಂತಿಸುತ್ತಾರೆ. ''ನಾವು ಎಲ್ಲಿಂದ ಶುರು ಮಾಡಬೇಕು ಗೊತ್ತಾ? ಭಾಷೆಯನ್ನು ಬಳಸುವುದರಿಂದ! ಸುಮ್ಮಸುಮ್ಮನೇ ಕೆಲವು ಮಕ್ಕಳು 'ನಂಗೆ ಡಿಪ್ರೆಷನ್ ಆಂಟಿ' ಎಂದು ಬಂದು ನಿಲ್ಲುತ್ತಾರೆ. ಯಾವುದಕ್ಕೋ ಬೇಸರವಾಗಿರುತ್ತದೆ, ಏನೋ ಸಿಗಲಿಲ್ಲವೆಂಬ ನಿರಾಸೆಯಾಗಿರುತ್ತದೆ ಅದು ಕೇವಲ ಮೈಂಡ್ ಅಪ್‌ಸೆಟ್ ಅಷ್ಟೇ ಅದನ್ನೂ ಈ ಜನ ಡಿಪ್ರೆಷನ್ ಎಂದು ಕರೆದು ಬಿಡುತ್ತಾರೆ! ಬರಿ ಭಾಷೆ ಅಷ್ಟೇ ಅಲ್ಲ ನಮ್ಮ ಮಕ್ಕಳಿಗೆ ತಮ್ಮ ಮನಸ್ಸಿನಲ್ಲಿ ಏನಾಗುತ್ತಿದೆ ಎನ್ನುವುದನ್ನೂ (ಸ್ಟೇಟ್ ಆಫ್ ಮೈಂಡ್) ಸರಿಯಾಗಿ ಅರ್ಥಮಾಡಿಕೊಳ್ಳುವುದನ್ನು ಕಲಿಸಬೇಕಾಗಿದೆ. ಮಕ್ಕಳಿಗೆ ಬಿಡಿ ದೊಡ್ಡವರಿಗೂ ಸ್ಟೇಟ್ ಆಫ್ ಮೈಂಡ್‌ನ ತಿಳುವಳಿಕೆ ಸರಿಯಾಗಿಲ್ಲ. ಉಪಾಧ್ಯಾಯರಿಗೆ ಮತ್ತು ಮಕ್ಕಳ ಪೋಷಕರಿಗೆ ಈ ದಿಕ್ಕಿನಲ್ಲಿ ಸರಿಯಾಗಿ ಸಕಾರಾತ್ಮಕವಾಗಿ ಚಿಂತಿಸುವಂತೆ 'ಎಂಪವರ್‌ಮೆಂಟ್ ಪ್ರೋಗ್ರಾಂ'ಗಳನ್ನು ಶಾಲೆಗಳೇ ಏರ್ಪಡಿಸಬೇಕು. ಆದರೆ ನಮ್ಮ ಶಾಲೆಗಳೋ 'ಒಳ್ಳೆಯ ಫಲಿತಾಂಶ ಹಾಗೂ ದೊಡ್ಡ ಫೀಸು' ಈ ತಿರುಗಣೆಯಲ್ಲಿ ತಿರುಗುತ್ತಿವೆ. ನ್ಯಾಯವಾಗಿ ನಮ್ಮ ಕಾಲೇಜುಗಳಲ್ಲಿ 'ಮೈಂಡ್ ಪಲ್ಯೂಶನ್' ಬಗ್ಗೆ ಎಚ್ಚರವಿರಬೇಕು. ಆದರೆ ಇಂಥ ದಿಸೆಯಲ್ಲಿ ಯಾವ ಕೆಲಸವೂ ಆಗುತ್ತಿಲ್ಲವಲ್ಲ'' ಎನ್ನುವ ಮೀನಾರವರಿಗೆ ನಮ್ಮ ಇಡಿ ಶಿಕ್ಷಣ ವ್ಯವಸ್ಥೆ ಬರೀ 'information bombard' (ಅಂದರೆ ಮಾಹಿತಿಗಳನ್ನು ಮಕ್ಕಳ ತಲೆಯಲ್ಲಿ ಸುರಿಸುವ) ಕೇಂದ್ರಗಳಾಗಿವೆ. ರಾಜ್ಯಸರ್ಕಾರ ಈ ದಿಕ್ಕಿನಲ್ಲಿ ಹೆಚ್ಚು ಯೋಚನೆ ಮಾಡಿ ಹೊಸ ಕಾರ್ಯಕ್ರಮಗಳನ್ನು

ಹಾಕಿಕೊಂಡಾಗಲೇ ಏನಾದರೂ ಒಳ್ಳೆಯ ಪ್ರತಿಫಲ ಬರಬಹುದು.

ರಾಷ್ಟ್ರೀಯ ಶಿಕ್ಷಣ ಕೇಂದ್ರ ನ್ಯಾಷನಲ್ ಇನ್ಸಿಟ್ಯೂಟ್ ಫಾರ್ ಓಪನ್ ಸ್ಕೂಲ್ (ಎನ್.ಐ.ಒ.ಎಸ್) ಎನ್ನುವ ಒಂದು ವ್ಯವಸ್ಥೆಯನ್ನು ಪ್ರಾರಂಭಿಸಿದೆ. ಮೀನಾರವರು ಈ ಶಾಲೆಗೂ ಕೆಲಸ ಮಾಡುತ್ತಾರೆ. 'ಡಲ್' ಎನ್ನುವ ಹಣೆ ಪಟ್ಟಿ ಕಟ್ಟಿಸಿಕೊಂಡು ಶಾಲೆಯಿಂದ ಹೊರಬಂದ ಮಕ್ಕಳಿಗೆ ಅವರ ನ್ಯೂನತೆಗಳನ್ನು ಪರಿಶೀಲಿಸಿ ಐದಾರು ವರ್ಷಗಳು ಕಷ್ಟಪಟ್ಟಾದರೂ ಅವರಿಗೊಂದು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸು ಮಾಡಿಸುವುದು ಇದರ ಗುರಿ. ನಂತರ ಅವರಿಗೆ ಹೊಂದುವಂಥಾ 'ಸ್ಕಿಲ್ ಎಜುಕೇಷನ್' (ಕೈ ಕೆಲಸಗಳಲ್ಲಿ, ಯಂತ್ರಗಳಲ್ಲಿ, ಕರಕುಶಲ ಕಲೆಯಲ್ಲಿ ಇತ್ಯಾದಿ)ನಲ್ಲಿ ತರಬೇತಿ ಕೊಡಿಸಿ ಮುಂದಿನ ಜೀವನಕ್ಕೆ ದಾರಿ ಮಾಡಿಕೊಡುವುದು. ಇಂಥಾ ಓಪನ್ ಸ್ಕೂಲ್‌ಗಳನ್ನು ಬೆಂಗಳೂರಿನ ಅನೇಕ ಶಾಲೆಗಳು ಒಂದು ವಿಭಾಗವಾಗಿ ಹೊಂದಿವೆ. ನಗರದಲ್ಲಷ್ಟೆ ಅಲ್ಲ ಎಲ್ಲ ಕಡೆಯಲ್ಲೂ ಇಂಥಾ ವಿಭಾಗವಿರುವುದು ಸೂಕ್ತ ಎನ್ನುವುದು ಮೀನಾರವರ ಅಭಿಮತ.

ಮೀನಾರವರ ಈ ಪುಟ್ಟ ಪ್ರಪಂಚದಲ್ಲಿ ಫ್ಯಾಮಿಲಿ ಕೌನ್ಸಿಲಿಂಗ್, ಟೀಚರ್ಸ್ ಟ್ರೈನಿಂಗ್ ಕೋರ್ಸ್, ಮತ್ತು ಗೃಹಿಣಿಯರಿಗೂ ಟ್ರೈನಿಂಗ್‌ನ್ನು ನೀಡುಲಾಗುತ್ತದೆ. ರಾಜ್ಯಮಟ್ಟದ ರಾಷ್ಟ್ರ ಮಟ್ಟದ ಅನೇಕ ಪ್ರಶಸ್ತಿಗಳು ಮೀನಾರವರನ್ನು ಹುಡುಕಿಕೊಂಡು ಬಂದಿವೆ. ಬೆಂಗಳೂರಿನ ಅನೇಕ ವೇದಿಕೆಗಳಲ್ಲಿ ಮೀನಾರವರು ತಮ್ಮ ವಿಚಾರ ಧಾರೆಯನ್ನು ಮಂಡಿಸಿದ್ದಾರೆ. ಅವರೆನ್ನುತ್ತಾರೆ ''ಪತ್ರಿಕೆಗಳು ಬರೀ ಈ ವಿಷಯದ ಬಗ್ಗೆ ಲೇಖನಗಳನ್ನು ಬರೆದುಬಿಡುತ್ತವೆ, ಆದರೆ ಈ ಸಮಸ್ಯೆಗೆ ಪರಿಹಾರವನ್ನು ಮಾತ್ರ ಗುರುತಿಸುವುದಿಲ್ಲ'' ಎಂದು. ಆದರೆ ನನಗನ್ನಿಸುತ್ತದೆ ಪರಿಹಾರವನ್ನು ಯಾರೋ ಒಬ್ಬ ಪತ್ರಕರ್ತ ಕೊಡಲಾಗುವುದಿಲ್ಲ. ಮೀನಾರವರಂಥ ಸಮರ್ಥರೇ ಬೇಕಾಗುತ್ತಾರೆ. ಕ್ಯಾನ್ಸರ್ ಪೀಡಿತ ಮಕ್ಕಳನ್ನು ಹುಡುಕಿಕೊಂಡು ಹೋಗಿ ಅವರ ಕೊನೆದಿನವನ್ನು ಹಿತವಾಗಿಸುವ, ತಮ್ಮ ಸೀಮಿತ ಪರಿಧಿಯಲ್ಲೇ ಅತ್ಯುತ್ತಮ ಸೇವೆ ಮಾಡುವ, ಸದಾ ನೋಯುವವರ ಕ್ಷೇಮಕ್ಕಾಗಿ ಚಿಂತಿಸುವ ಮೀನಾರವರ ಸಂತತಿ, ಇವರಂಥಾ ಜನರ ಗುಂಪು ನೂರು ಸಾವಿರವಾಗಬೇಕು. ಇವರ ಈ ಪ್ರಯತ್ನ ಲಕ್ಷಜನರಿಗೆ ಮಾದರಿಯಾಗಬೇಕು. ಆಗಲೇ ಮೀನಾರವರ ಪ್ರಯತ್ನಕೊಂದು ಸಾರ್ಥಕತೆ ಬರುತ್ತದೆ. ಮೀನಾರಿಗೆ ಶುಭವಾಗಲಿ. ❑❑

ನಭಾಬಿನ ತನಕ

ನಿಗೂಢ ಕತ್ತಲೆಯ ಭೇದಿಸಿ
ಹೊತ್ತು ತರುತ್ತಿದ್ದಾರೆ ನೀರೆಯರು
ಬೆಳಕಿನ ಹೊಸ ಕಿರಣಗಳ ಭೂಮಿಗೆ
ಚಂದ್ರಲೋಕದ ಹೊಸ ಬೆಳಕು
ಶೋಧನೆಗಳ ಮಿಂಚು ಸೆಳಕು
ಹರಿದು ಬರಲಿಲ್ಲವೇಕೆ
ನನ್ನ ಮನೆ ಅಂಗಳಕೆ
ಗೋಡೆ ಕಿಟಕಿಗಳ ಹಾಯ್ದು
ನಭಾಬಿನ ಬಾಳಿಗೆಯ ತನಕ
ಹರಿದು ಬರಲಿಲ್ಲವೇಕೆ
ಪ್ರಖರ ತೇಜದ ಬೆಳಕು
ನುಸುಳಿ ಬರಲಿಲ್ಲವೇಕೆ
ಕಿಂಡಿಗಳ ಕೊರೆದು
ಮಧ್ಯಪ್ರಾಚ್ಯದ ತನಕ
ಲೋಕದಲಿ ಮಿಂಚು ಸಂಚಾರ
ವನಿತೆಯರ ಶೋಧಗಳು
ಹಾಲು ಬೆಳದಿಂಗಳಲಿ
ಆಳಿಸಲಿಲ್ಲವೇಕೆ
ಚಂದ್ರನ ಮುಖದ ಕಲೆಗಳು ?
ನಕ್ಷತ್ರ ನಿಹಾರಿಕೆಗಳ ಲೋಕಕೆ
ಹಾರಲಿದ್ದಾರೆ ನೀರೆಯರು
ಅಂತರಿಕ್ಷದ ನಿರ್ವಾತದಲಿ
ಹೊಸ ಹೊಸ ಪ್ರಯೋಗಗಳು
ವಿಸ್ತೃತ ಅವರ
ಅನುಭವದ ಲೋಕ
ಅಭಿವೃದ್ಧಿಯತ್ತ ಹೆಜ್ಜೆ
ಹೊಸ ಹೊಸ ಶೋಧಗಳತ್ತ
ಕೈಚಾಚಿ ಹಾರುತ್ತಿದ್ದಾರೆ ಅವರು
ನಾನೇಕೆ ಹಾರಲಿಲ್ಲ ಆಗಸಕೆ
ಹಿಡಿದು ತರಲಿಲ್ಲವೇಕೆ
ಭೂಮಿಗೆ ನಕ್ಷತ್ರಗಳ
ನಾನೇಕೆ ತೆರೆದುಕೊಳ್ಳಲಿಲ್ಲ
ನಭಾಬಿನ ಒಳಗೆ
ಜ್ಞಾನ ಲೋಕದ ಬಾಗಿಲು ?

–ಕೆ. ಷರೀಫಾ

ಒಂದು ಸಾವಿನ ಸುತ್ತ

ಪತ್ರಿಕೆಗಳು ಸುದ್ದಿ ಮಾಡಿದವು
ಟಿ.ವಿ. ಛಾನಲ್ಲುಗಳು ಎಡೆಬಿಡದೆ ಬಿತ್ತರಿಸಿದವು
ಬೆಂಗಳೂರು ನಗರವೇ ಬೆಚ್ಚಿ ಬೀಳಿಸುವ ಸುದ್ದಿ
ರಾತ್ರಿ ಕತ್ತಲೆಯಲಿ ನಡೆದೇ ಹೋಯ್ತು
ಸಾಫ್ಟವೇರ್ ಇಂಜೇನಿಯರಳ ಕೊಲೆ
ಬರ್ಬರ ಅತ್ಯಾಚಾರ, ಹುಟ್ಟಿಸಿದೆ
ಮೆಟ್ರೋ ಮಹಿಳೆಯರ ಮೈಯಲ್ಲಿ ನಡುಕ.

ಜಾಗತಿಕ ಗ್ರಾಹಕರ ನೇರ ಸಮಪರ್ಕ
ಕಾಲ್ ಸೆಂಟರ್‌ಗಳ ಲೋಕ ಭಾವನಾತ್ಮಕ
ಹೈಟೆಕ್ ಸಂಸ್ಕೃತಿಗಳ ಲೋಕ ಭಾವನಾತ್ಮಕ
ಹೈಟೆಕ್ ಸಂಸ್ಕೃತಿಗಳ ಹಿಂದೆ ಅಡಗಿರುವ
ನೂರಾರು ಗೈರತ್ತು-ಶಿಸ್ತಿನ ಕೊಕ್ಕುಗಳು
ದಾಟಲಾಗದು ಡೆಡ್‌ಲೈನ್‌ಗಳು
ಜೀವ ಹೋದರೂ ಸರಿಯೇ
ಹೊತ್ತಲ್ಲದ ಹೊತ್ತಲ್ಲಿ ನಿರಂತರ ದುಡಿತ
ಮಾನಸಿಕ ಒತ್ತಡ, ರಕ್ಷಣೆ ಕೇಳಿದರೆ
ಕೆಲಸ ಹೋಗುವ ಭಯ
ದುಡಿಯಲೇಬೇಕಿದೆ ಹೊಟ್ಟೆಪಾಡಿದೆಯಲ್ಲ ?

ಸಮಾನತೆಯ ಸೂತ್ರದಲಿ ಬಂಧಿಸಿಯಾಗಿಸಿ
ಅವಳನು ಆಪತ್ತಿನ ಬಾಯಿಗೆ ದೂಡುವುದೇಕೆ ?
ಜೀವನದಿಯಾಗಿ ತುಂಬಿ ಹರಿದವಳು
ಕರ್ಮ ಕಾಂಡಗಳ ಸಹಿಸಿ ಬತ್ತಬೇಕೇಕೆ ?
ಸೂರ್ಯಶಿಕಾರಿಗೆ ಹೊರಟವಳ
ದಾರಿಗೆ, ಅಡ್ಡಗೋಡೆಗಳ ಒಡ್ಡುವುದೇಕೆ ?
ಎಲ್ಲ ಸಾಧಿಸಲು ಹೊರಟವಳಿಗೆ
ಇಲ್ಲವಾಗಿಸುವ ಹುನ್ನಾರಗವೆ ?

ಅವಳ ಶ್ರಮ ಕಂಪನಿಗಳ ಲಾಭಕ್ಕಲ್ಲವೇ ?
ಇರಲಿ ನಮ್ಮವನೇ ಚಾಲಕ ನಮ್ಮದೇ ಕಂಪನಿ
ವಿದೇಶಿಯರ ಲಾಭಕ್ಕೆ ಇನ್ನೇಷ್ಟು ಬಲಿಗಳು ?
ಕತ್ತಲೆಯ ಗೋರಿಯಿಂದ ಎದ್ದು ಬಾರಮ್ಮ
ಅವರ ಪಾತಕದ ಒಂದೊಂದು ಬಿಲ್ಲೆಯ
ಲೆಕ್ಕವನೂ ಬಿಡದೇ ಕೇಳು ಬಾರಮ್ಮ
ಇಲ್ಲವಾದರೆ ಹೆಣ್ಣುಗಳು ಹೇಗೆ ದುಡಿದಾರು ?
ಭೂಮಿ ಮೇಲೆ ತಮ್ಮ ತುತ್ತನ್ನು
ತಾವು ಹೇಗೆ ಗಳಿಸಿ ಯಾರು ?

-ಕೆ. ಷರೀಫಾ

ಅಚಲ ಚಂದಾ ವಿವರ

ವಾರ್ಷಿಕ ಚಂದಾ : ರೂ. 50/-
(ವ್ಯಕ್ತಿಗಳಿಗೆ)

ರೂ. 100/- ಸಂಸ್ಥೆಗಳಿಗೆ

ಅಜೀವ ಚಂದಾ : ರೂ. 300/-
(ವ್ಯಕ್ತಿಗಳಿಗೆ)

ರೂ. 400/- ಸಂಸ್ಥೆಗಳಿಗೆ



CPMG/KA/BGS-8/2006-08 RNI No. 45577/88

Posted at Basavanagudi P.O. On the 25/29th of every Month

March - 2006

Statement about ownership and other Particulars about newspaper ACHALA - Form IV (see Rule 8)

1. Place of Publication : Bangalore, Karnataka State
2. Periodicity of Publication : Monthly
3. Printer's Name, Address : **Lipi Mudrana,** Basavanagudi, Bangalore - 4.
4. Publisher's Name : **Dr. G. Ramakrishna** for Jagruthi Mahila Adhyayana Kendra, Bangalore.

   Nationality : Indian

   Address : 108, Skyline Surabhi, 14-P, Vidyapeeta Road, B.S.K. III Stage, Bangalore-560085.
5. Editor's Name : **Dr. N. Gayathri** 108, Skyline Surabhi, 14-P, Vidyapeeta Road, B.S.K. III Stage, Bangalore-560085.
6. Name & Address of Individuals who own the news paper : **Jagruthi Mahila Adhyayana Kendra** 108, Skyline Surabhi, 14-P, Vidyapeeta Road, B.S.K. III Stage, Bangalore-560085.

I, G. Ramakrishna, here by declare that the particular given above are true to the best of my knowledge and belief.

Bangalore ***Sd/-***
25-3-2006 ***G. Ramakrishna***

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri